ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಅಯೋಧ್ಯಾ: ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವತಿಯಿಂದ ನೂತನ ರಾಮಮಂದಿರದಲ್ಲಿ ಶ್ರೀರಾಮ ಲಲ್ಲಾನ ಪ್ರಾಣಪ್ರತಿಷ್ಠೆಯ ಪ್ರಯುಕ್ತ ಅಕ್ಷತಾ ಕಲಶ ವಿತರಣಾ ಕಾರ್ಯಕ್ರಮ ನಡೆಯಿತು.

ಸಂಪುಟ : 45 | ಸಂಚಿಕೆ : 14 | ಆಶ್ವಯುಜ-ಕಾರ್ತಿಕ | ಕಲಿಯುಗಾಬ್ದ 5125 | 15-11-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಇಸ್ರೇಲ್ vs ಹಮಾಸ್: ಇತಿಹಾಸ, ಸಮರದ ಹಿನ್ನೆಲೆ ಮತ್ತು ವಾಸ್ತವ ಚಿತ್ರಣ

ಇಸ್ರೇಲ್ ದೇಶ ಮತ್ತು ಹಮಾಸ್ ಉಗ್ರರ ನಡುವಿನ ಸಮರ ಅನೇಕ ಜಾಗತಿಕ ಚರ್ಚೆಗಳನ್ನು ಮುನ್ನೆಲೆಗೆ ತಂದಿದೆ.

ಒಂದು ಭೂಭಾಗದ ಕೆಲವು ಭಾಗದ ಪ್ರದೇಶಗಳನ್ನು ಜೋರ್ಡನ್, ಸಿರಿಯಾ, ಲೇಬನಾನ್, ಈಜಿಪ್ಟ್‌ನವರು ಆಳುತ್ತಿದ್ದರು. ವ್ಯಾಪಾರದ ಉದ್ದೇಶಕ್ಕಾಗಿ ಆ ಭೂಭಾಗವನ್ನು ರೋಮನ್ನರು ಪ್ಯಾಲೆಸ್ತೀನ್ ಎಂದು ಕರೆದರು. ಅಲ್ಲಿದ್ದವರು ಪ್ಯಾಲೆಸ್ತೀನಿಯನ್ನರು ಎಂದೆನಿಸಿಕೊಂಡರು. ಎಷ್ಟನ್ನು ಗೆಲ್ಲುತ್ತೇವೆಯೋ ಅಷ್ಟು ನಮ್ಮದು ಎನ್ನುವ ವಸಾಹತುಶಾಹಿಯ ಕಾಲದಲ್ಲಿ ಫ್ರೆಂಚರು, ಬ್ರಿಟಿಷರು ಕೆಲವು ಪ್ರದೇಶಗಳನ್ನು ಗೆದ್ದುಕೊಂಡರು. ಅದೇ ಸಮಯದಲ್ಲಿ ಯಹೂದಿಗಳ ಮೇಲೆ ಜರ್ಮನಿಯ ನಾಜಿ ಮಾರಣ ಹೋಮ ನಡೆಯಿತು. ನಂತರದ ದಿನಗಳಲ್ಲಿ ಯಹೂದಿಗಳು ನಮಗೊಂದು ದೇಶಬೇಕೆಂದು ಕೇಳಿಕೊಂಡಾಗ ಬ್ರಿಟಿಷರು ಉಗಾಂಡವನ್ನು ತೆಗೆದುಕೊಳ್ಳಲು ತಿಳಿಸಿತು. ಆದರೆ ಜೆರುಸೇಲಮನ್ನು ಮರೆತ ದಿನ ನನ್ನ ಬಲಗೈ ತನ್ನ ಕೌಶಲ್ಯವನ್ನು ಮರೆತು ಬಿಡಲಿ ಎನ್ನುವುದನ್ನು ಪ್ರಪಂಚದ ಮೂಲೆಮೂಲೆಯಲ್ಲಿ ಹೇಳಿಕೊಂಡು ಬಂದ ಯಹೂದಿಗಳು ಜೆರುಸೇಲಮನ್ನು ಕೇಳಿದಾಗ ಸ್ವಲ್ಪ ಭೂಭಾಗವನ್ನು ನೀಡಲಾಯಿತು. ಆಗ ಭಿನ್ನಾಭಿಪ್ರಾಯಗಳು ಮೂಡಿದವು. ಪ್ಯಾಲೆಸ್ತೀನ್‌ನ ಒಳಗೇ ಎರಡು ಅಭಿಪ್ರಾಯಗಳಿವೆ. ಒಂದು ಮಾತುಕತೆಯ ಮೂಲಕ ಶಾಂತಿ ಸೌಹಾರ್ದವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಪ್ಯಾಲೆಸ್ತೀನಿಯನ್ ಅಥಾರಿಟಿಯ ಅಭಿಪ್ರಾಯ ಮತ್ತೊಂದು ಪ್ರಪಂಚದಲ್ಲಿ ಇಸ್ರೇಲ್ ಅನ್ನುವ ರಾಷ್ಟ್ರವೇ ಇರಬಾರದು ಎನ್ನುವ ಹಮಾಸ್‌ನ ಅಭಿಪ್ರಾಯ. ಇದರ ಕಾರಣಕ್ಕೆ ಹಲವು ಯುದ್ಧಗಳ ಮುಂದುವರೆದ ಭಾಗವಾಗಿ ಇಂದು ಇಸ್ರೇಲ್ ಮತ್ತು ಹಮಾಸ್‌ನ ನಡುವೆ ನಡೆಯುತ್ತಿರುವ ಯುದ್ಧ.

**ಸುರಕ್ಷತೆಗೆ ಮಾನ್ಯತೆ:** ಗಾಜಾದ ಗಡಿಭಾಗದಲ್ಲಿ ಹಮಾಸ್ ಉಗ್ರರ ದಾಳಿಗೆ ಒಳಗಾದ ಪ್ರದೇಶದ ಜನರಿಗೆ ಇಸ್ರೇಲ್ ಸರ್ಕಾರದ ವತಿಯಿಂದ ಸಿಟಿಪ್ಲಾಜಾ ಎನ್ನುವಂತಹ ಹೊಟೇಲ್‌ನಲ್ಲಿ ನಾವು ಉಳಿದುಕೊಂಡಿದ್ದೆವು. ಸಿಟಿಪ್ಲಾಜಾದಿಂದ ವಾರ್‌ಝೋನ್ 60 ಕಿ.ಮೀ. ದೂರದ ಗಡಿಯ ಆಚೆಗಿನ ಸ್ಥಿತಿ ಭಿನ್ನವಾಗಿದೆ. ಮಕ್ಕಳು, ಹೆಣ್ಣುಮಕ್ಕಳು ಸಾಯುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ವ್ಯವಸ್ಥೆಯಿಲ್ಲ, ವೈದ್ಯರಿಲ್ಲ, ಆಹಾರದ ವ್ಯವಸ್ಥೆಯೂ ಇಲ್ಲ. ಆಗ ನಮ್ಮನ್ನು ಯಾರೂ ಆಳಬೇಕು ಎನ್ನುವುದು ಎಷ್ಟು ಮುಖ್ಯವಾಗುತ್ತದೆ ಎನ್ನುವುದರ ಅರಿವಾಯಿತು. ನಮಗೆ ಮತದಾನದ ಸಂದರ್ಭದಲ್ಲಿ ಜಾತಿ, ಉಪಜಾತಿ, ಧರ್ಮ, ದೇವಸ್ಥಾನ, ಮಸೀದಿ, 2000 ರೂಪಾಯಿ ದುಡ್ಡು, ಕರೆಂಟು ಉಚಿತಕ್ಕಿಂತ ಮುಖ್ಯವಾದ ಅಂಶ ಸುಭದ್ರತೆ ಎನ್ನುವುದಾಗಿದೆ.

**ನಮ್ಮ ತಪ್ಪು ಮುಂದಿನ ಪೀಳಿಗೆಯನ್ನು ಬಾಧಿಸುತ್ತದೆ:** 2005ರವರೆಗೆ ಗಾಜಾದ ಹಿಡಿತ ಇದ್ದದ್ದು ಇಸ್ರೇಲ್‌ನವರ ಕೈಯಲ್ಲಿ. ಆದರೆ 2005ರಲ್ಲಿ ಗಾಜಾವನ್ನು ಬಿಟ್ಟುಕೊಡಬೇಕಾದ ಸಂದರ್ಭದಲ್ಲಿ ಅಲ್ಲಿದ್ದ 8000 ಜನ ಯಹೂದಿಗಳನ್ನು ಸುರಕ್ಷತೆಯ ದೃಷ್ಟಿಯಿಂದ ಕರೆದುಕೊಂಡು ಬಂದರು. ನಂತರ ಅಲ್ಲಿ ಚುನಾವಣೆಯಾಯಿತು. 2006ರಲ್ಲಿ ನಡೆದ ಚುನಾವಣೆಯಲ್ಲಿ ಅಭೂತಪೂರ್ವವಾಗಿ ಗೆದ್ದಿದ್ದು ಹಮಾಸ್! ಕೆಲವೇ ತಿಂಗಳುಗಳಲ್ಲಿ ಜನ ಪರಿಣಾಮವನ್ನು ಎದುರಿಸಿದರು. ಹಮಾಸ್ ತನ್ನ ರಾಜಕೀಯ ವಿರೋಧಿ ಪ್ಯಾಲೆಸ್ಟೇನಿಯನ್ ಅಥೋರಿಟಿಯ ಆಫ್ ಫತಾಹ್‌ದ ನರಮೇಧ ಮಾಡಿಬಿಟ್ಟಿತ್ತು. ಕೊಂದದ್ದು ಇಸ್ರೇಲ್‌ನವರನ್ನೋ, ಯಾಹೂದಿಗಳನ್ನೋ ಅಲ್ಲ. ಬದಲಾಗಿ ಮುಸ್ಲಿಮರನ್ನೇ. ಕೊಂದದ್ದು ಯಾಕೆ? ರಾಜಕೀಯ ಭಿನ್ನಾಭಿಪ್ರಾಯಗಳು ಇದೆ ಎನ್ನುವ ಕಾರಣಕ್ಕೆ. ನೋಡು ನೋಡುತ್ತಿದ್ದಂತೆ 600 ಜನರನ್ನ ಕೊಂದರು. ಇದು ಆಯ್ಕೆಯ ಫಲಿತಾಂಶ. ಇಂದು ತಾವು ಮಾಡದ ತಪ್ಪಿಗೆ ಅಲ್ಲಿನ ಮುಗ್ಧ ಮಕ್ಕಳು ಪ್ರಾಣ ಬಿಡುತ್ತಿದ್ದಾರೆ.

**ಅಭದ್ರತೆಯ ಅರಿವಾಗಬೇಕು:** ಬೆಳಗ್ಗೆ ಮನೆಯಿಂದ ಹೊರಟ ನಂತರ ಸಂಜೆ ಸುರಕ್ಷಿತವಾಗಿ ಮನೆಗೆ ಬರಬಹುದು ಎನ್ನುವ ಭದ್ರತೆ ಯಾವ ದೇಶಗಳಲ್ಲಿವೆ ಎನ್ನುವ ಅಂಶದ ಆಧಾರದ ಮೇಲೆ ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆ ಜಗತ್ತಿನಾದ್ಯಂತ ಆರಂಭವಾಗಿದೆ. ಇದರ ಮಹತ್ವ ಭಾರತದಲ್ಲಿ ಸುರಕ್ಷಿತವಾಗಿರುವ ಜನರಿಗೆ ಅರ್ಥವಾಗುವುದು ಕಡಿಮೆ. ಇಲ್ಲಿ ಯಾವುದೂ ಅನಿಶ್ಚಿತವಲ್ಲ. ಹಾಗಾಗಿ ನಾವು ನಮ್ಮ ವಾರದ ಕೊನೆಯನ್ನು, ಮುಂದಿನ ತಿಂಗಳಿನ ಯೋಜನೆಗಳನ್ನು ಇಂದೇ ನಿರ್ಧರಿಸುತ್ತೇವೆ. ಅಷ್ಟು ಖಚಿತವಾಗಿ ನಮ್ಮ ಜೀವನದ ಯೋಜನೆಗಳು ರೂಪಿತವಾಗಿವೆ. ಆದರೆ ಇಸ್ರೇಲ್ ಅಥವಾ ಪ್ಯಾಲೆಸ್ತೀನ್‌ನಲ್ಲಿ ಇದು ಸಾಧ್ಯವೇ? ಭದ್ರತೆ ಮತ್ತು ಸುರಕ್ಷತೆಯ ಮಹತ್ವವು ಅಭದ್ರತೆಯನ್ನು ಅನುಭವಿಸಿದಾಗ ಅರಿವಾಗುತ್ತದೆ.



ಯುದ್ಧ ನಡೆಯುತ್ತಿದ್ದದ್ದು ಇಸ್ರೇಲ್‌ನ ದಕ್ಷಿಣ ಭಾಗವಾದ ಗಾಝಾಸ್ಟ್ರಿಪ್‌ನಲ್ಲಿ. ಗಾಝಾಸ್ಟ್ರಿಪ್ ಎನ್ನುವಂತದ್ದು 41 ಕಿ.ಮೀ. ಉದ್ದ, ಕೆಲವು ಕಡೆ 6 ಕಿ.ಮೀ ಕೆಲವೊಂದು ಕಡೆ 12 ಕಿ.ಮೀ ಅಗಲವಿದ್ದ ಒಂದು ಸಣ್ಣ ಪಟ್ಟಿ. ಅದರ ಎಡಗಡೆ ಮೆಡಿಟರೇನಿಯನ್ ಸಮುದ್ರವಿದೆ. ಕೆಳಗಡೆ ಈಜಿಪ್ಟ್ ಗಡಿ ಬರುತ್ತದೆ. ಇನ್ನೆರಡು ಕಡೆ ಇಸ್ರೇಲ್ ಸುತ್ತುವರೆದಿದೆ. ಇದು ಯುದ್ಧ ನಡೆಯುತ್ತಿರುವ ಪ್ರದೇಶ. ಹಲವು ರಕ್ಷಣಾತ್ಮಕ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಪ್ರತಿಭಟನೆಗಳು ನಡೆಯುತ್ತಿದೆ ಎಂದು ತಿಳಿಸಲ್ಪಟ್ಟ ಅಲ್ಮನಾರ್‌ಸ್ಕ್ವೇರ್‌ಗೆ ಯುದ್ಧದ ಕವರೇಜ್ಗಾಗಿ ಹೋದೆವು. ಆದರೆ ಹಲವು ತಾಸುಗಳು ಕಾದರೂ ಅಲ್ಲಿಗೆ ಯಾರೂ ಬರಲಿಲ್ಲ. ಪ್ರತಿಭಟನೆ ನಡೆಯಲೇ ಇಲ್ಲವೆಂದಲ್ಲ. ಆದರೆ ಅದರ ಪ್ರಮಾಣ ಕಡಿಮೆ. ಆದರೆ ಇದಕ್ಕೆ ವಿಪರೀತವಾಗಿ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿ ಪ್ಯಾಲೆಸ್ತೀನ್ ಪರ ಪ್ರತಿಭಟನೆ, ಕೇರಳದಲ್ಲಿ ಹಮಾಸ್‌ನ ಮಾಜಿ ನಾಯಕನ ಆನ್‌ಲೈನ್ ಭಾಷಣ ಆಯೋಜನೆ, ಆಲಿಗಢ ವಿಶ್ವವಿದ್ಯಾನಿಲಯದಲ್ಲಿ ಘೋಷಣೆಗಳು ಕೇಳಿಬರುತ್ತವೆ. ಅದಕ್ಕೆ ಎಡಪಂತಿಯರೂ ಜೊತೆ ಸೇರಿದ್ದಾರೆ. ಯಾವ ಭಿನ್ನ ಅಭಿಪ್ರಾಯಗಳಿಗೆ ಹಕ್ಕನ್ನು ನೀಡಬೇಕೆಂದು ಇಲ್ಲಿ ಪ್ರತಿಪಾದಿಸುವರೋ, ಪ್ಯಾಲೆಸ್ತೀನ್ ಸೇರಿದಂತೆ ಅರಬ್‌ನ 22 ರಾಷ ಗಳಲ್ಲಿ ಅದು ಸಾಧ್ಯವಿಲ್ಲ. ಸಾಧ್ಯವಿದ್ದಿದ್ದರೆ ರಾಜಕೀಯ ಭಿನ್ನಾಭಿಪ್ರಾಯಕ್ಕಾಗಿ 600 ಮಂದಿಯನ್ನು ಕೊಲ್ಲುತ್ತಿರಲಿಲ್ಲ.

**ಸಮಸ್ಯೆಗಳ ಗರ್ಭ ಜೆರುಸಲೇಮ್:** ಜಗತ್ತಿನ ಅತೀ ಸೂಕ್ಷ್ಮವಾದ (ಮೋಸ್ಟ್ ವೊಲಟೈಲ್) 35 ಎಕರೆ ಪ್ರದೇಶ. ಮೂರು ಸೆಮೆಟಿಕ್ ಮತಗಳ ಶ್ರದ್ಧಾಕೇಂದ್ರ. ಒಂದು ಕಡೆ ಅಲ್‌ಅಕ್ಸಾ ಮಸೀದಿ ಇದೆ. ಮೊಹಮದ್ ಪೈಗಂಬರರು ಮೆಕ್ಕಾದಲ್ಲಿ ಇದ್ದಾಗ ರಾತ್ರಿ ದೂರದ ಮಸೀದಿಗೆ ಹೋಗಿದ್ದ, ಅಲ್ಲಿ ಏಸುಕ್ರಿಸ್ತ, ಮೋಸೆಸ್ರ ಜೊತೆಗೆ ಪ್ರಾರ್ಥನೆ ಮಾಡಿ ದೇವರನ್ನು ಭೇಟಿಯಾಗಿ ಬಂದಿದ್ದರೆನ್ನುವ ಉಲ್ಲೇಖ ಬರುತ್ತದೆ. ಅಲ್ಲಿಂದಲೇ ದೇವರ ಭೇಟಿಗೆ ಮೊಹಮ್ಮದ್ ಪೈಗಂಬರರು ಹೋಗಿದ್ದರು ಎನ್ನುವುದು ಮುಸ್ಲಿಮರ ನಂಬಿಕೆ. ಅದರ ಪಕ್ಕದಲ್ಲಿ ಯಹೂದಿಗಳು ವೆಸ್ಟರ್ನ್‌ವಾಲ್ ಎಂದು ಕರೆಯುವ ಗೋಡೆಯನ್ನು ಪೂಜಿಸುತ್ತಾರೆ. ಅವರ ನಂಬಿಕೆಯ ಪ್ರಕಾರ ಅಲ್‌ಅಕ್ಸಾ ಮಸೀದಿ ಇದ್ದ ಜಾಗದಲ್ಲಿ ಅವರ ಮೊದಲನೆಯ ದೇವಸ್ಥಾನ ಇತ್ತು. ಅದನ್ನು ಬ್ಯಾಬಿಲೋನಿಯರು ಹೊಡೆದು ಹಾಕಿದರು. ಅಲ್ಲಿ ಯಹೂದಿಗಳು ಮತ್ತೊಂದು ದೇವಸ್ಥಾನವನ್ನು ಕಟ್ಟಿದರು. ಅದನ್ನು ರೋಮನ್ನರು ಬಂದು ಹೊಡೆದು ಹಾಕಿದರು. ಆ ಎರಡನೆಯ ದೇವಸ್ಥಾನದ ಕಟ್ಟಕಡೆಯ ಪಳೆಯುಳಿಕೆಯಾಗಿ ಇದೊಂದು ಗೋಡೆ ಉಳಿದುಕೊಂಡಿದೆ. ಎಲ್ಲಿ ತನಕ ನಾವು ನಮ್ಮ ದೇವಸ್ಥಾನದ ಪುನರ್ನಿರ್ಮಾಣ ಮಾಡುವುದಿಲ್ಲವೋ ಅಲ್ಲಿ ತನಕ ಈ ಗೋಡೆಗೆ ಪೂಜೆ ಮಾಡುತ್ತೇವೆ ಎಂದು ಯಹೂದಿಗಳು ಪ್ರಾರ್ಥಿಸುತ್ತಿರುವ ಗೋಡೆ ವೆಸ್ಟರ್ನ್‌ವಾಲ್. ಮತ್ತೊಂದು ಕಡೆ ಹೋಲಿ ಸೆಪಲ್ಚರ್ ಚರ್ಚ್ ಇದೆ. ಅದು ಏಸು ಕ್ರಿಸ್ತರನ್ನು ಶಿಲುಬೆಗೇರಿಸಿದಂತಹ ಜಾಗ. ಈ 35 ಎಕರೆ ಜಾಗದಲ್ಲಿ ಇಡೀ ಸಮಸ್ಯೆ ಗರ್ಭ ಅಡಗಿದೆ. ಹಾಗಾದರೆ ಪ್ರಸ್ತುತ ಇದು ದೇಶ ದೇಶಗಳ ನಡುವೆ ನಡೆಯುತ್ತಿರುವ ಭೌಗೋಳಿಕ ಅಸ್ಮಿತೆಯ ಮಧ್ಯದ ಕದನವೇ? ಅಥವಾ ಮತ-ಮತಗಳ ನಡುವಿನ ಕದನವೇ? ಎಂದು. ಎರಡನೆಯದ್ದು ಸತ್ಯಕ್ಕೆ ಹತ್ತಿರವಾದದ್ದು. ಇದು ಮತ-ಮತಗಳ ನಡುವಿನ ಕದನ.

**ಪ್ಯಾಲೆಸ್ತೀನ್ ಪರ ಕಥನ ಹುಟ್ಟಿಕೊಂಡಿದ್ದೇಗೆ?** ಇಂದು ಪ್ಯಾಲೆಸ್ತೀನ್‌ನ ಬೆಂಬಲಿಸುವಂತಹ ಅಕ್ಕ ಪಕ್ಕದ ಇಸ್ಲಾಮಿಕ್ ರಾಷ್ಟ್ರಗಳು. ಆದರೆ ಈ ಪ್ರೀತಿ ಐತಿಹಾಸಿಕವಾದದ್ದಲ್ಲ. ಏಕೆಂದರೆ ಪ್ಯಾಲೆಸ್ತೀನ್‌ನಲ್ಲಿ ಯಹೂದಿಗಳು ಬಂದು ಇಸ್ರೇಲ್ ಎಂದು ಘೋಷಣೆ ಮಾಡಿಕೊಂಡಂತಹ ದಶಕಗಳ ನಂತರವೂ ಪ್ಯಾಲೆಸ್ತೀನ್ ಎಂದು ಕರೆಸಿಕೊಳ್ಳಲಾಗುತ್ತಿದ್ದಂತಹ ಜಾಗದಲ್ಲಿ ಎಷ್ಟು ಜಾಗವನ್ನು ನಾವು ಗೆದ್ದುಕೊಳ್ಳಬಹುದು ಎಂದು ಅಕ್ಕಪಕ್ಕದ ಅಷ್ಟೂ ದೇಶಗಳು ಪ್ರಯತ್ನ ಪಟ್ಟಿವೆ, ದಂಡೆತ್ತಿಕೊಂಡು ಹೋಗಿವೆ, ದಾಳಿ ಮಾಡಿವೆ. ಅದಕ್ಕೆ ಇತಿಹಾಸ ಇದೆ. ಅಂತಹ ರಾಷ್ಟ್ರಗಳು ಪ್ಯಾಲೆಸ್ತೀನ್ ಪರ ನಿಲ್ಲಲು ಕಾರಣವಿದೆ. ಭೌಗೋಳಿಕವಾಗಿ ತಮಗಿಂತ ಚಿಕ್ಕದಾದ ಮತ್ತು ಆಗಷ್ಟೇ ಹುಟ್ಟಿಕೊಂಡ ರಾಷ್ಟ್ರವಾದ ಇಸ್ರೇಲ್‌ನ ಮೇಲೆ ಸುತ್ತಮುತ್ತಲಿನ 22 ಅರಬ್ ದೇಶಗಳು ದಂಡೆತ್ತಿ ಬಂದವು ಎನ್ನುವುದು ಇಸ್ರೇಲ್‌ನನ್ನು ಖಳನಾಯಕನಾಗಿಸುವುದರಲ್ಲಿ ಸಫಲವಾಗುವುದಿಲ್ಲ. ಹಾಗಾದರೆ ಕೊಡಬೇಕಾದ ಕಥನ (ನರೇಟಿವ್) ಏನು? ಎಂದು ಯೋಚಿಸಿದರು. ಆಗ ಪ್ಯಾಲೆಸ್ತೀನ್‌ನ ಭೂಭಾಗ 1920, 1947, 1967ರಲ್ಲಿ ಎಷ್ಟಿತ್ತು? ಈಗ ಎಷ್ಟಿದೆ? ಎಂದು ನೋಡಿದರೆ ಅಲ್ಲಿ ಇಸ್ರೇಲ್‌ನ ಭೂಭಾಗ ಹೆಚ್ಚಿದೆ. ಪ್ಯಾಲೆಸ್ತೀನಿಯರು ನಿರಾಶ್ರಿತರಾಗಿದ್ದಾರೆ. ಗಾಝಾದ ಜನರು ನಿರಾಶ್ರಿತರ ಶಿಬಿರಗಳಲ್ಲಿದ್ದಾರೆ. ಅಲ್ಲಿ ಅವರ ಜೀವನ ಮಟ್ಟ ಸರಿಯಾಗಿಲ್ಲ, ಅವರ ಮಕ್ಕಳಿಗೆ ಶಿಕ್ಷಣ ಸಿಗುತ್ತಿಲ್ಲ, ಹಾಸ್ಪಿಟಲ್‌ಗಳಿಲ್ಲ. ಇದಕ್ಕೆ ಇಸ್ರೇಲ್ ಕಾರಣ ಎಂದು ಬಿಂಬಿಸಿ ಜಾಗತಿಕ ಅನುಕಂಪ ಹುಟ್ಟಿಸುವ ನಿರೂಪಣೆ ಯಶಸ್ವಿಯಾಗುತ್ತದೆ ಎಂದು ನಿರ್ಧರಿಸಿದರು. ಈ ಅನುಕಂಪದ ಕಾರಣಕ್ಕಾಗಿ ಹುಟ್ಟಿಕೊಂಡಿದ್ದು ಪಾಲೆಸ್ತೀನ್. ಅಲ್ಲಿ ತನಕ ಈಗ ಯಾವುದನ್ನು ಪ್ಯಾಲೆಸ್ತೀನ್‌ನ ವೆಸ್ಟ್‌ಬ್ಯಾಂಕ್ ಎಂದು ಕರೆಯುತ್ತೇವೆಯೋ ಆಗ ಅದನ್ನು ಜೋರ್ಡನ್ ಆಳುತಿತ್ತು. ಈಗ ಯಾವುದನ್ನು ಗಾಝಾ ಎಂದು ಕರೆಯುತ್ತೇವೆಯೋ ಅದನ್ನು ಈಜಿಪ್ಟ್ ಆಳುತ್ತಿತ್ತು. ಇಸ್ರೇಲ್ ಒಂದಾದ ನಂತರ ಒಂದನ್ನು ವಶಪಡಿಸಿಕೊಂಡು ಪ್ಯಾಲೆಸ್ತೀನ್‌ನವರಿಗೆ ಒಂದು ಸ್ಥಳವನ್ನು ಸೂಚಿಸಿತು. ಆಗ ಹುಟ್ಟಿಕೊಂಡಿದ್ದು ಪ್ಯಾಲೆಸ್ತೀನ್‌ನ 26 ಲಕ್ಷ ಜನ ನಿರಾಶ್ರಿತರ ಪ್ರಶ್ನೆ!

ಆದರೆ ನಿಜವಾಗಿ ಜಗತ್ತಿನ ಅತಿದೊಡ್ಡ ನಿರಾಶ್ರಿತರ ಸಮಸ್ಯೆ ಇರುವುದು ಪ್ಯಾಲೆಸ್ತೀನ್‌ನ ಪರವಾಗಿ ವೆಸ್ಟ್‌ಬ್ಯಾಂಕ್‌ನ ಪರವಾಗಿ ನಾವು ಬಡಿದಾಡುತ್ತಿದ್ದೇವೆ ಎಂದು ಹೇಳುತ್ತಿರುವ ಮತ್ತು ಇಂದಿಗೂ ಇಸ್ರೇಲ್ ಮೇಲೆ ದಾಳಿ ಮಾಡುತ್ತಿರುವಂತಹ ಸಿರಿಯಾದಲ್ಲಿದೆ. ಅರಬ್‌ಸ್ಪ್ರಿಂಗ್ ಹೆಸರಿನಲ್ಲಿ ಶುರುವಾದಂತಹ ಒಂದು ಹೋರಾಟ ಇಸ್ಲಾಮಿಕ್‌ನ ಸ್ಟೇಟ್ ಐಸಿಸ್‌ನ ರೂಪ ಪಡೆದುಕೊಂಡಿತು. ಆ ಐಸಿಸ್ ಗೆ ಹೆದರಿ ಒಂದು ಕೋಟಿ ನಲವತ್ತು ಲಕ್ಷ ಜನ ಮನೆ ಮಠ ಬಿಟ್ಟರು. ಇಸ್ಲಾಮ್ ಹುಟ್ಟಿದಂತಹ ಸೌದಿ ಅರೇಬಿಯಾ ಅವರ ಪೈಕಿ ಎಷ್ಟು ಜನರನ್ನು ಒಳಗೆ ಕರೆದುಕೊಂಡಿತು ಎಂದರೆ ಒಬ್ಬರನ್ನೂ ಇಲ್ಲ. ಆ ಒಂದು ಕೋಟಿ ನಲವತ್ತು ಲಕ್ಷ ಜನರಲ್ಲಿ 15 ಲಕ್ಷ ಜನ ಯೂರೋಪ್ ತಲುಪಿದರು. ಆಗ ಮುಂದೊಂದು ದಿನ ಯುರೋಪ್ ಇದಕ್ಕೆ ಬೆಲೆ ತೆರಬೇಕಾದೀತು ಎಂದು ಲೇಖನ ಪ್ರಕಟವಾಗಿತ್ತು. ಈಗ ಅದು ನಿಜವಾಗುತ್ತಿದೆ. ಅನೇಕ ಘಟನೆಗಳು ಸಾಕ್ಷಿಯಾಗಿವೆ. ಇತ್ತೀಚೆಗೆ ಯು.ಎ.ಇ ನ ವಿದೇಶಾಂಗ ಸಚಿವರು ಒಂದು ಮಾತನ್ನು ಹೇಳುತ್ತಾರೆ "ಮುಂದಿನ ದಿನಗಳಲ್ಲಿ ಅತೀ ಹೆಚ್ಚು ಭಯೋತ್ಪಾದಕರು ಯುರೋಪ್‌ನಿಂದ ಬರುತ್ತಾರೆ. ಯಾಕೆಂದರೆ ಯುರೋಪ್‌ನ ರಾಷ್ಟ್ರಗಳು ರಾಜಕೀಯವಾಗಿ ಸರಿಯಾಗಿರಬೇಕು ಎನ್ನುವ ಕಾರಣಕ್ಕೆ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡರು." ಎನ್ನುತ್ತಾರೆ.

(ಪತ್ರಕರ್ತ **ಅಜಿತ್ ಹನಮಕ್ಕನವರ್** ಅವರು ಮಂಥನ ಬೆಂಗಳೂರು ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ನಿರೂಪಣೆ.)

## ಸಂಸ್ಮರಣೆ ಕವಿರಾಜಮಾರ್ಗ



ಕವಿರಾಜಮಾರ್ಗ ಕನ್ನಡದಲ್ಲಿ ಉಪಲಬ್ಧವಿರುವ ಗ್ರಂಥಗಳ ಪೈಕಿ ಅತ್ಯಂತ ಪುರಾತನವಾದುದು ಮತ್ತು ಜಗತ್ತಿನ ಅತ್ಯಂತ ಹಳೆಯ ಲಾಕ್ಷಣಿಕ ಗ್ರಂಥಗಳ ಸಾಲಿನಲ್ಲಿ ಸ್ಥಾನಪಡೆದಿದೆ. ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿ ಶ್ರೀವಿಜಯನಿಂದ ಕವಿರಾಜಮಾರ್ಗ ರಚಿಸಲ್ಪಟ್ಟಿದೆ. ಇದು ವ್ಯಾಕರಣ, ಅಲಂಕಾರ, ಧ್ವನಿರಚನೆ ಸೇರಿದಂತೆ ಅನೇಕ ಸಾಹಿತ್ಯಿಕ ವಿಚಾರಗಳನ್ನು ಚರ್ಚಿಸಿ ಮುಂದಿನ ಕವಿಗಳಿಗೆ ರಾಜಮಾರ್ಗ ತೋರಿದ ಹೊತ್ತಿಗೆ.

ಹಾಗಿದ್ದರೆ ಕವಿರಾಜಮಾರ್ಗ ಕೇವಲ ಶಾಸ್ತ್ರಗ್ರಂಥವೇ? ಅಲ್ಲಿ ಕೇವಲ ವ್ಯಾಕರಣಗಳ ಬಗ್ಗೆ ಚರ್ಚಿಸಲಾಗಿದೆಯೇ ಎಂದರೆ ಖಂಡಿತ ಇಲ್ಲ. ಏಕೆಂದರೆ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಭೌಗೋಳಿಕತೆ, ರಾಜಕೀಯ ಸ್ಥಿತಿಗತಿ ಹೀಗೆ ಅಂದಿನ ಅನೇಕ ವಿಚಾರಗಳನ್ನು ಚರ್ಚಿಸುವಾಗ ಕವಿರಾಜಮಾರ್ಗವನ್ನು ಹೊರತುಪಡಿಸಿ ಮಾತನಾಡಲು ಸಾಧ್ಯವಿಲ್ಲ. ಹೀಗಾಗಿ ನಿಸ್ಸಂದೇಹವಾಗಿ ಕವಿರಾಜಮಾರ್ಗ ಬಹುಮುಖಿ ನೆಲೆಯಲ್ಲಿ ಅಂದಿನ ಕನ್ನಡ ನಾಡಿನ ಮತ್ತು ಸಾಹಿತ್ಯದ ಮಾಹಿತಿ ನೀಡುವ ಗ್ರಂಥವಾಗಿದೆ.

ಕವಿರಾಜಮಾರ್ಗ ಒಟ್ಟು ಮೂರು ಪರಿಚ್ಛೇದಗಳನ್ನ ಒಳಗೊಂಡಿದ್ದು. ಸರಸ್ವತಿ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ದೋಷಾನುದೋಷ ವರ್ಣನಾ ನಿರ್ಣಯದಲ್ಲಿ ಕಾವ್ಯದೋಷದ ಬಗ್ಗೆ ಚರ್ಚಿಸಿದರೆ, ಶಬ್ದಾಲಂಕಾರ ವರ್ಣನಾನಿರ್ಣಯ ಮತ್ತು ಅರ್ಥಲಂಕಾರ ವರ್ಣನಾನಿರ್ಣಯದಲ್ಲಿ ಅಲಂಕಾರಗಳ ಚರ್ಚೆಯಾಗಿದೆ. ಕನ್ನಡ ಕಾವ್ಯದೊಳಗೆ ಸಂಸ್ಕೃತವನ್ನು ಹೇಗೆ? ಯಾವ ಪ್ರಮಾಣದಲ್ಲಿ? ಬಳಸಬೇಕು ಎಂಬುದನ್ನು ತನ್ನ ಗ್ರಂಥದಲ್ಲಿ ಚರ್ಚಿಸುವ ಮೂಲಕ ಅನ್ಯ ಭಾಷೆಗಳಿಂದ ಕನ್ನಡದ ಅನನ್ಯತೆಯನ್ನು ಕಾಪಾಡಿಕೊಳ್ಳುವ ಬಗ್ಗೆ ಮಾರ್ಗಕಾರ ಚಿಂತಿಸುತ್ತಾನೆ.

ಕವಿರಾಜಮಾರ್ಗವು 9ನೇ ಶತಮಾನಕ್ಕಿಂತಲೂ ಮುಂಚಿನ ಪೂರ್ವದ ಹಳಗನ್ನಡದ ಅಸ್ತಿತ್ವವನ್ನು ಸ್ಪಷ್ಟಪಡಿಸುತ್ತದೆ. ವಿಮಳ, ಉದಯ, ನಾಗುರ್ಜನ, ಜಯಬಂಧು ಮೊದಲಾದ ಕನ್ನಡದ ಕವಿಗಳ ಉಲ್ಲೇಖವು ಮಾರ್ಗಕಾರನಿಗೂ ಮುಂಚೆ ಕನ್ನಡ ಸಾಹಿತ್ಯ ಅಸ್ತಿತ್ವದಲ್ಲಿತ್ತು ಎಂಬುದನ್ನು ಪ್ರಚುರಪಡಿಸುತ್ತದೆ.

"ಕಾವೇರಿಯಿಂದಮಾ ಗೋದಾವರಿ ವರಮಿರ್ಪಾ ನಾಡದಾ ಕನ್ನಡದೊಳ್" ಎಂದು ಹೇಳುವ ಮೂಲಕ ನಮ್ಮ ನಾಡಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಗಡಿರೇಖೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ ಮೊಟ್ಟಮೊದಲ ಉಪಲಬ್ದ ಪುಸ್ತಕ ಕವಿರಾಜಮಾರ್ಗ. ಅಂದಿನ ತಿರುಳ್ಗನ್ನಡ ಪ್ರದೇಶಗಳು, ಕರ್ನಾಟಕದ ಗಡಿಗಳು, ಉಪಭಾಷೆಗಳ ಕುರಿತ ಮಾಹಿತಿ ಈ ಹೊತ್ತಿಗೆಯಲ್ಲಿದೆ.

ಕನ್ನಡ ಸಾಹಿತ್ಯದ ವಿಶಿಷ್ಟ ರೂಪಗಳಾದ ಚತ್ತಾಣ, ಬೆದಂಡೆ, ಒನಕೆವಾಡು ಪ್ರಕಾರಗಳ ಬಗ್ಗೆ ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. "ಕುರಿತೋದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂದು ಹೇಳುವ ಮೂಲಕ ಕನ್ನಡಿಗರ ಮೌಖಿಕ ಪರಂಪರೆಯ ಕುರಿತು ಹೆಮ್ಮೆಯನ್ನು ಮೂಡಿಸುತ್ತದೆ. ಕನ್ನಡಿಗರ ಔದಾರ್ಯವನ್ನು ಮೆಚ್ಚಿಕೊಳ್ಳುತ್ತಾ ನಿಷ್ಪಕ್ಷಪಾತವೂ, ಬುದ್ಧಿಶಾಲಿಯೂ, ನ್ಯಾಯಪರವೂ ಆದ ಅವರ ಗುಣಸ್ವಭಾವಗಳನ್ನು (ಸುಭಟರ್ಕಳ್, ಚೆಲ್ವರ್ಕಳ್, ಗುಣಿವಳಿ, ಅಭಿಮಾನಿಗಳ್, ವಿವೇಕಿಗಳ್..) ತನ್ನ ಗ್ರಂಥದಲ್ಲಿ ಶ್ರೀವಿಜಯ ಉಲ್ಲೇಖಿಸುತ್ತಾನೆ.

ಕೇವಲ ಕಾವ್ಯಮೀಮಾಂಸೆಯ ಗ್ರಂಥವಾಗಿ ಉಳಿಯದೆ ಕನ್ನಡ ವಿದ್ವತ್ ವಲಯದಲ್ಲಿ ಸಾಂಸ್ಕೃತಿಕ ಪಠ್ಯವಾಗಿಯೇ ಗುರುತಿಸಿಕೊಂಡಿರುವ ಮೇರು ಗ್ರಂಥ ಕವಿರಾಜಮಾರ್ಗ. 9ನೇ ಶತಮಾನದಲ್ಲಿ ಶ್ರೀವಿಜಯ ದಂಡಿಯ ಕಾವ್ಯದರ್ಶವನ್ನು ಆಧಾರವಾಗಿಟ್ಟುಕೊಂಡು ಕನ್ನಡ ಸಂಸ್ಕೃತಿ ಮತ್ತು ಪುಟ್ಟಕನ್ನಡ ಜಗತ್ತನ್ನೇ ತನ್ನ ಗ್ರಂಥದಲ್ಲಿ ಕಟ್ಟಿಕೊಟ್ಟ ಬಗೆ ಅನುಪಮವಾದುದು.

## ಎಲ್ಲೋ ಕೇಳಿದ ಕಥೆ

### ಮನುಷ್ಯಬಲ ಮೊದಲು, ಹಣವಲ್ಲ

ಪಂಡಿತ್ ಮದನಮೋಹನ ಮಾಲವೀಯ ಅವರು ಒಮ್ಮೆ ನಾಗಪುರಕ್ಕೆ ಬಂದಿದ್ದಾಗ ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರು ಅವರನ್ನು ಮೋಹಿತೆವಾಡಾದ ಸಂಘಶಾಖೆಗೂ ಕರೆದು ತಂದಿದ್ದರು. ಆಗ ಆ ಸಂಘಸ್ಥಾನದ ಸನ್ನಿವೇಶ ತುಂಬ ಚೆನ್ನಾಗಿತ್ತೆಂದೇನಲ್ಲ. ಒಂದಿಷ್ಟು ಜಾಗವನ್ನು ಆಡಲಿಕ್ಕೆ ಯೋಗ್ಯವಾಗಿ ಮಾಡಲಾಗಿತ್ತೆಂಬುದು ನಿಜವೇ. ಆದಷ್ಟು ಸ್ವಚ್ಛವಾಗಿಯೂ ಇತ್ತು. ಆದರೆ ಅಲ್ಲಿ ಮುರಿದು ಬಿದ್ದ ಗೋಡೆ, ಹಾಳು ಬಿದ್ದ ಕಟ್ಟಡ, ಅಲ್ಲಲ್ಲಿ ಉಳಿದು ಹೋಗಿದ್ದ ಭಗ್ನಾವಶೇಷಗಳು ಇತ್ಯಾದಿ, ಮನಸ್ಸಿಗೆ ಖುಷಿ ನೀಡುವಂತಹದಾಗಿರಲಿಲ್ಲವೆಂಬುದು ಸಹ ಅಷ್ಟೇ ಸತ್ಯ. ಅಲ್ಲಿನ ಈ ವಿಧದ ಸನ್ನಿವೇಶ ಕಂಡು ಮಾಲವೀಯಜಿಯವರಿಗೆ ಸಂಘದ ಆರ್ಥಿಕ ಸ್ಥಿತಿ ಚೆನ್ನಾಗಿರಲಾರದು ಅನಿಸಿತು. ಈ ಹಿನ್ನೆಲೆಯಲ್ಲಿ ಅವರು ಡಾಕ್ಟರಜಿಯವರ ಬಳಿ, "ನೋಡಿ ನನ್ನನ್ನು ಓರ್ವ ಶ್ರೀಮಂತ ಭಿಕ್ಷುಕ ಎನ್ನಲಾಗುತ್ತದೆ, ಅದಕ್ಕಾಗಿ ನೀವೇನನ್ನಾದರೂ ಅಪೇಕ್ಷೆ ಪಟ್ಟಲ್ಲಿ, ನಿಮಗಾಗಿಯೂ ನಾನು ನಾಲ್ಕಾರು ಮಂದಿಯೊಂದಿಗೆ ಮಾತಾಡಿ ಒಂದಿಷ್ಟು ನಿಧಿ ಸಂಗ್ರಹಿಸಿ ಕೊಡಬಲ್ಲೆ" ಎಂದರು.

ಆಗ ಡಾಕ್ಟರಜಿಯವರು, "ಪಂಡಿತ್‌ಜಿ, ನಮಗೆ ಹಣದ ಅಂತಹ ಅಗತ್ಯವೇನೂ ಇಲ್ಲ. ನಮಗೆ ಬೇಕಾದುದು ನಿಮ್ಮಂತಹ ಹಿರಿಯರ ಆಶೀರ್ವಾದ ಮಾತ್ರ" ಎಂದರು. ಇದನ್ನು ಕೇಳಿ ಮಾಲವೀಯರು ಆಶ್ಚರ್ಯಪಟ್ಟರು. ಅವರು "ತುಂಬಾ ಸಂತೋಷ, ನೀವಷ್ಟು ಕೃಪೆ ತೋರಿದಲ್ಲಿ ಭಾರೀ ಉಪಕಾರ" ಇತ್ಯಾದಿ ಉತ್ತರಗಳನ್ನು ನಿರೀಕ್ಷಿಸಿದ್ದರು. ಅಂತಹ ಅನೇಕ ಸಂಸ್ಥೆಗಳು ಅವರಿಗೆ ಈ ಮೊದಲೇ ಪರಿಚಿತವಾಗಿದ್ದವು. ಈ ಅನುಭವದ ಹಿನ್ನೆಲೆಯಲ್ಲಿ ಅವರು ಡಾಕ್ಟರಜಿಯವರ ಬಳಿ "ಇತರ ಸಂಸ್ಥೆಗಳಲ್ಲಿ ಮೊದಲು ಹಣ, ನಂತರವಷ್ಟೇ ಮನುಷ್ಯಬಲದ ಬಗ್ಗೆ ಲಕ್ಷ್ಯವಿರುವುದು ನನಗೆ ಅನುಭವದಿಂದ ಗೊತ್ತು. ಆದರೆ ನಿಮ್ಮ ರೀತಿಯೇ ಬೇರೆಯಾಗಿ ಕಾಣಿಸುತ್ತಿದೆ. ನಿಮ್ಮ ಈ ವಿಶೇಷತೆಯನ್ನು ನಾನು ಹೋದಲೆಲ್ಲ ಸ್ಮರಿಸುವೆ" ಎಂದರು.

## ಹೊಸ ಭರವಸೆಗಳು – ಹೊಸ ಬೆಳಕು, ಕಿಶೋರಿ ವಿಕಾಸ ಕೇಂದ್ರ

ಹೈದರಾಬಾದಿನ ಜನನಿಬಿಡ ರೈಲ್ವೆ ನಿಲ್ದಾಣಗಳಲ್ಲಿ ಒಂದಾದ ಅಮೀರ್‌ಪೇಟ್ ರೈಲ್ವೆ ನಿಲ್ದಾಣದಲ್ಲಿ ತೆಲಂಗಾಣದ ಸೇವಾಭಾರತಿಯ ಪ್ರಾಂತ ಸಚಿವೆ ಜಯಪ್ರದಾ ಅವರು ಅಸಹನೀಯ ವೇದನೆಯಿಂದ ಕೂಡಿದ್ದ ತಾಯಿ ಮತ್ತು 15 ವರ್ಷದ ಮಗಳ ಬಾಯಿಂದ ಕೇಳಿದ ಭಯಾನಕ ಅತ್ಯಾಚಾರದ ಘಟನೆ ಅವರಲ್ಲಿ ಇಂತಹ ಅನ್ಯಾಯಕ್ಕೆ ಒಳಗಾದ ಬಾಲಕಿಯರಿಗೆ ಹೇಗೆ ಸಹಾಯ ಮಾಡಬೇಕು? ಎಂಬ ಪ್ರಶ್ನೆ ಮೂಡಿತು. ಈ ಪ್ರಶ್ನೆಯ ಉತ್ತರವನ್ನು ಬಯಸಿ ಜಯಪ್ರದಾ ಅವರು ಸಂಘದ ಕಾರ್ಯಾಲಯದ ಕಡೆಗೆ ನಡೆದರು. ಸವಾಲು ಈ ಹುಡುಗಿಯದೊಂದೆ ಆಗಿರಲಿಲ್ಲ, ಸೇವಾಬಸತಿಗಳಲ್ಲಿ ವಾಸಿಸುವ ಸಾವಿರಾರು ಹುಡುಗಿಯರದೂ ಆಗಿತ್ತು. ಅವರಿಗೆ ಶಿಕ್ಷಣ, ಬೆಳವಣಿಗೆಗಳ ಜೊತೆಜೊತೆಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಶಿಕ್ಷಣವೂ ಕೂಡ ಮುಖ್ಯವಾಗಿತ್ತು. ಅಂದಿನ ಕ್ಷೇತ್ರ ಸೇವಾ ಪ್ರಮುಖರಾಗಿದ್ದ ಪಟೋಲಾ ರಾಮರೆಡ್ಡಿ ಮತ್ತು ಪ್ರಾಂತ ಸಂಘಚಾಲಕರಾಗಿದ್ದ ದೇಶಮುಖ್ ಅವರು ಈ ವಿಷಯದ ಗಂಭೀರತೆಯನ್ನು ಪರಿಗಣಿಸಿ ನಿರಂತರ ಪ್ರಯತ್ನದಿಂದ ಸೇವಾಬಸತಿಗಳಲ್ಲಿನ ಕಿಶೋರಿಯರ ಸಮಗ್ರ ವಿಕಾಸಕ್ಕಾಗಿ ಕಿಶೋರಿ ವಿಕಾಸ ಕೇಂದ್ರದ ರೂಪರೇಷೆಯನ್ನು ರಚಿಸಿದರು.



ಇದಕ್ಕಾಗಿ ಎಲ್ಲಿ ಬಾಲಕರ ಸಂಸ್ಕಾರ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದವೋ, ಅಲ್ಲಿ ಕಿಶೋರಿ ವಿಕಾಸ ಕೇಂದ್ರವನ್ನು ಪ್ರತಿದಿನವೂ ನಡೆಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ಸೇವಾಯಾತ್ರೆಯಲ್ಲಿ ಹಣದ ಕೊರತೆಯಾಗದಂತೆ ನೋಡಿಕೊಳ್ಳಲು ಕಳೆದ 10 ವರ್ಷಗಳಿಂದ ಇದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದೇಹಿ ಚಾರಿಟೆಬಲ್ ಟ್ರಸ್ಟ್ ಮತ್ತು ಸಮಾಜದ ಸಹಯೋಗದಿಂದ ಸಂಗ್ರಹಿಸಲಾಗುತ್ತದೆ. 2004ರಲ್ಲಿ ಭಾಗ್ಯನಗರದ ನಾಗೌಲ್ ಮತ್ತು ಇಬ್ರಾಹಂಪುರದಲ್ಲಿ 10 ಕಿಶೋರಿ ವಿಕಾಸ ಕೇಂದ್ರಗಳು ಶುರುವಾದವು. 2022ರಲ್ಲಿ ಈ ಕೇಂದ್ರಗಳ ಸಂಖ್ಯೆ 293ಕ್ಕೆ ಏರಿದವು, ಈ ಕೇಂದ್ರಗಳು ಕಳೆದ 18 ವರ್ಷಗಳಿಂದ ಸಾವಿರಾರು ಬಾಲಕಿಯರ ಸದೃಢ ಭವಿಷ್ಯವನ್ನು ರೂಪಿಸುತ್ತಿವೆ.


ಕಿಶೋರಿ ವಿಕಾಸ ಕೇಂದ್ರ ಎಂದರೆ ಏನು? ಪ್ರತಿದಿನ ಎರಡು ಗಂಟೆಗಳ ಕಾಲ ನಡೆಯುವ ಈ ಕೇಂದ್ರಗಳಲ್ಲಿ ಶಾಲೆಯ ಹೋಂವರ್ಕ್ ಮಾಡಿಸುವ ಜೊತೆಜೊತೆಗೆ ಆರೋಗ್ಯದ ಜಾಗೃತಿ, ಸ್ವಯಂರಕ್ಷಣೆ, ಆತ್ಮನಿರ್ಭರರನ್ನಾಗಿ ಮಾಡಲು ಹೊಲಿಗೆ, ಕಸೂತಿ ಮತ್ತು ಹಬ್ಬಗಳಲ್ಲಿ ಮೂರ್ತಿಗಳನ್ನು ನಿರ್ಮಿಸುವಂತಹ ವೃತ್ತಿಪರ ತರಬೇತಿಯನ್ನೂ ನೀಡಲಾಗುತ್ತದೆ. ಈ ಕೇಂದ್ರಗಳು ಕಿಶೋರಿಯರಿಗೆ ಜೀವನದ ಪ್ರತಿಯೊಂದು ಅಂಶಗಳ ಬಗ್ಗೆ ಅರಿವು ಮೂಡಿಸುತ್ತದೆ. ಒಳ್ಳೆಯ ಮತ್ತು ಕೆಟ್ಟ ಸ್ಪರ್ಶಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಸಿಕೊಡಲಾಗುತ್ತದೆ. ಸಮಾಜದಲ್ಲಿ ಕಷ್ಟಗಳನ್ನು ಎದುರಿಸುವುದೇಗೆ? ಹೇಗೆ ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳುವುದು ಎನ್ನುವುದನ್ನೂ ಇಲ್ಲಿ ಹೇಳಿಕೊಡಲಾಗುತ್ತದೆ. ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರವನ್ನಷ್ಟೇ ಅಲ್ಲ, ದೇಶಭಕ್ತಿಯ ಭಾವವನ್ನು ಜಾಗೃತಗೊಳಿಸಲಾಗುತ್ತದೆ. ಟ್ಯೂಷನ್ ಸೆಂಟರ್‌ಗಳಂತೆ ಕಾಣುವ ಈ ಕೇಂದ್ರಗಳು ದೇಶವನ್ನು ಪ್ರೀತಿಸುವ, ಸಮಾಜದ ಬಗ್ಗೆ ಕಾಳಜಿ ಇರುವಂತಹ ಧೀಮಂತ ಮಹಿಳೆಯರನ್ನು ಹುಟ್ಟುಹಾಕುತ್ತಿದೆ. ಜೊತೆಗೆ ಹೈದರಾಬಾದಿನಲ್ಲಿ ಪ್ರತೀ ವರ್ಷ ನಡೆಸುವ ರನ್ ಫಾರ್ ಗರ್ಲ್ ಚೈಲ್ಡ್ ಎಂಬ ಹೆಸರಿನಲ್ಲಿ ಬೃಹತ್ ಫಿಟ್‌ನೆಸ್ ಕಾರ್ಯಕ್ರಮವನ್ನು ಆಯೋಜಿಸಿ ಇಡೀ ಸಮಾಜಕ್ಕೆ ಈ ಕಿಶೋರಿಯರ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.

ಈ ಕೇಂದ್ರಗಳು ಕಾರ್ಯನಿರ್ವಹಿಸುವ ಬಸತಿಗಳಲ್ಲಿ ಹಲವು ಬದಲಾವಣೆಗಳಾಗಿವೆ. ಮನೆಯ ಎಲ್ಲಾ ಕಷ್ಟಗಳನ್ನು ಎದುರಿಸಿ ಕಿಶೋರಿ ಕೇಂದ್ರದ ಸಹಾಯದಿಂದ ಶಿಕ್ಷಣವನ್ನು ಪಡೆದು ಸ್ವಾವಲಂಬಿಗಳಾಗಿ ಬೆಳೆದ ನೂರಾರು ವಿದ್ಯಾರ್ಥಿನಿಯರು, ತಾವು ಪಡೆದದ್ದನ್ನು ಸಮಾಜಕ್ಕೆ ಮರಳಿಸುವ ಕಾರ್ಯವನ್ನು ಕಿಶೋರಿ ತಂಡದ ಜೊತೆ ಸೇರಿ ಮಾಡುತ್ತಿದ್ದಾರೆ. ಜೂಜು ಮತ್ತು ಡ್ರಗ್ಸ್‌ನ ಜಾಲಕ್ಕೆ ಬಲಿಯಾಗಿದ್ದ ಊರುಗಳು ವ್ಯಸನಮುಕ್ತಗೊಂಡಿವೆ. ಕಿಶೋರಿ ಕೇಂದ್ರಗಳು ತನ್ನ ಚಟುವಟಿಕೆಗಳ ಮೂಲಕ ಬಸತಿಯ ಚಿಂತನೆಯನ್ನೇ ಬದಲಿಸಿದೆ. ವ್ಯಸನಗಳ ದಾಸರಾಗಿದ್ದ ಯುವಕರು ಇಂದು ಕಿಶೋರಿ ಕೇಂದ್ರಗಳ, ದೇವಾಲಯಗಳ ಶೆಡ್ ನಿರ್ಮಿಸಲು ಸಹಕರಿಸುತ್ತಿದ್ದಾರೆ. ಅಷ್ಟೇ ಅಲ್ಲ, ಈ ಕೇಂದ್ರದ ಯಶಸ್ಸಿನಿಂದ ಪ್ರಭಾವಿತರಾಗಿ ಆ ಪ್ರದೇಶದಲ್ಲಿ ಇನ್ನೂ 80 ಕೇಂದ್ರಗಳನ್ನು ತೆರೆಯಲಾಗಿದೆ. ಕಿಶೋರಿ ವಿಕಾಸ ಕೇಂದ್ರದ ಈ ಸಮರ್ಥ ಕಿಶೋರಿಯರು ಬದುಕಿನಲ್ಲಿ ಹೊಸ ಭರವಸೆಯೊಂದಿಗೆ ದೇಶದಲ್ಲಿ ಹೊಸ ಬದಲಾವಣೆಯ ಕಹಳೆಯನ್ನು ಮೊಳಗಿಸುತ್ತಿದ್ದಾರೆ.

## ಪುಸ್ತಕ ಪರಿಚಯ

### ನಾನಾನಿಂದ ನೇತಾಜಿವರೆಗೆ ಸ್ವಾತಂತ್ರ್ಯ ಸಂಗ್ರಾಮ 1857–1947

**ಲೇಖಕರು:** ಚಂದ್ರಶೇಖರ ಭಂಡಾರಿ
**ಬೆಲೆ:** 120
**ಪ್ರಕಾಶನ:** ಸಾಹಿತ್ಯ ಪ್ರಕಾಶನ




ಭಾರತದಲ್ಲಿ 19–20ನೇ ಶತಮಾನಗಳಲ್ಲಿ ನಡೆದ ಸ್ವಾತಂತ್ರ್ಯ ಸಂಘರ್ಷ ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದುದ್ದು ಮತ್ತು ರೋಮಾಂಚಕಾರಿ–ಯಾದುದ್ದು. ಒಂದು ಕಡೆ ವಿಶುದ್ಧ ರಾಷ್ಟ್ರದರ್ಶನ ಬೋಧೆಯ ಮೂಲಕ ಸ್ವಾತಂತ್ರ್ಯಾಭಿಮುಖವಾಗಿ ಜನಮಾನಸದ ನಿರ್ಮಾಣ, ಇನ್ನೊಂದು ಕಡೆ ನೇರವಾಗಿ ವಿದೇಶೀ ಪ್ರಭುತ್ವಕ್ಕೆ ಸವಾಲೆಸೆದ ಸಶಸ್ತ್ರ ಹೋರಾಟ, ಮತ್ತೊಂದು ಕಡೆ ಗಲ್ಲುಕಂಬಕ್ಕೂ ಬ್ರಿಟಿಷರ ಪಾಶವೀಶಕ್ತಿಗೂ ಎದೆಯೊಡ್ಡಿದ ಕ್ರಾಂತಿಕಾರಿಗಳ ಬಲಿದಾನದ ದೀರ್ಘಸರಣಿ, ಅಂತಿಮ ಹಂತದಲ್ಲಿ ಸ್ವತಂತ್ರ ಬೃಹತ್ ಸೇನೆಯನ್ನು ಸಜ್ಜುಗೊಳಿಸಿ ಆಂಗ್ಲ ಸರ್ಕಾರದ ಮುಖ್ಯ ಅವಲಂಬವಾಗಿದ್ದ ಸೇನಾಶಕ್ತಿಯನ್ನು ನಿರರ್ಥಕಗೊಳಿಸಿ ಸ್ವಾತಂತ್ರ್ಯಪ್ರಾಪ್ತಿಯನ್ನು ತೀವ್ರಗೊಳಿಸಿದ್ದು – ಇಂತಹ ವಿವಿಧಮುಖ ಅಭಿಯಾನಗಳ ಫಲವಾಗಿ 1947ರಲ್ಲಿ ಭಾರತ ದಾಸ್ಯಮುಕ್ತಗೊಂಡಿತು. ಈಗಿನ ಪೀಳಿಗೆಗೆ ಪ್ರೇರಣಾದಾಯಿಯಾಗಿರುವ ಈ ಇತಿಹಾಸದ ಹಲವು ಮುಖಗಳ ಚಿತ್ರಣವನ್ನು ಈ ಪುಸ್ತಕದಲ್ಲಿ ಕಾಣಬಹುದು.

https://www.sahityabooks.com/shop/sahitya-sindhu-prakashana/nananinda-netajiyavarege-swatantrya/

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಪೂಜಾ ತೀರ್ಥಹಳ್ಳಿ

## ಪ್ರಪಂಚದಾದ್ಯಂತ ರಾಗಿಯ ಪ್ರಚಾರ: ನರೇಂದ್ರ ಮೋದಿ



ಅಂತಾರಾಷ್ಟ್ರೀಯ ಯೋಗ ದಿನದ ಮೂಲಕ ಯೋಗವನ್ನು ವಿಶ್ವವ್ಯಾಪಿಯಾಗಿಸಿದ ರೀತಿಯಲ್ಲೇ ರಾಗಿಯ ಕುರಿತು ಜಾಗತಿಕ ಮಟ್ಟದಲ್ಲಿ ಜಾಗೃತಿ ಅಭಿಯಾನ ಯೋಜಿಸಿದ್ದು, ಪ್ರಪಂಚದಾದ್ಯಂತ ರಾಗಿಯನ್ನು ಪರಿಚಯಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಆಹಾರ ಸಂಸ್ಕರಣಾ ಉದ್ಯಮಗಳ ಸಚಿವಾಲಯ ದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಿದ್ದ ಮೂರು ದಿನಗಳ ಬೃಹತ್ ಆಹಾರ ಮೇಳ 'ವರ್ಲ್ಡ್ ಫುಡ್ ಇಂಡಿಯಾ 2023' ಎರಡನೇ ಆವೃತ್ತಿಯನ್ನು ಅವರು ತಿಳಿಸಿದ್ದಾರೆ.

## ಭಾರತದಲ್ಲಿ ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳು 18%ಕ್ಕೆ ಏರಿಕೆ




ಪ್ರಸ್ತುತ ಭಾರತವು ಜಾಗತಿಕವಾಗಿ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಾಗಿ ತನ್ನನ್ನು ತಾನು ಸ್ಥಾಪಿಸಿಕೊಂಡಿದೆ. ಪ್ರಬಲ ವಲಯಗಳಾದ ತಂತ್ರಜ್ಞಾನ, ಫಿನ್‌ಟೆಕ್, ಎಡ್ಟೆಕ್ ಮತ್ತು ಹೆಲ್ತ್‌ಟೆಕ್ ಪರಿಸರ ವ್ಯವಸ್ಥೆಯ ದಾರಿಯನ್ನು ಮುನ್ನಡೆಸುತ್ತಿದೆ. ವುಮೆನ್ಸ್ ಇನ್ ಇಂಡಿಯಾಸ್ ಸ್ಟಾರ್ಟ್‌ಅಪ್ ಇಕೋಸಿಸ್ಟಮ್ ರಿಪೋರ್ಟ್ (ವೈಸರ್) ವರದಿಯ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳು 18% ಕ್ಕೆ ಏರಿದೆ.

## ಜಲ ಜೀವನ್ ಮಿಷನ್: 73% ಸಂಪೂರ್ಣ

ಜಲ ಜೀವನ್ ಮಿಷನ್ ಮೂಲಕ 70 ಪ್ರತಿಶತ ಗ್ರಾಮೀಣ ಕುಟುಂಬಗಳಿಗೆ ಇಲ್ಲಿಯವರೆಗೆ ನಲ್ಲಿ ನೀರಿನ ಸಂಪರ್ಕಗಳನ್ನು ಒದಗಿಸಲಾಗಿದೆ. ಜಲ ಜೀವನ್ ಮಿಷನ್ ಅಂಕಿಅಂಶಗಳ ಪ್ರಕಾರ,

# ಸಾಲುದ್ದದ ಸುದ್ದಿಗಳು

Har Ghar Jal
Jal Jeevan Mission

ದೇಶದ 19,24,26,914 ಗ್ರಾಮೀಣ ಕುಟುಂಬಗಳ ಪೈಕಿ 13,47,50,894 ಕುಟುಂಬಗಳಿಗೆ ಇಲ್ಲಿಯವರೆಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 9, ಶೇಕಡಾ 100ರಷ್ಟು ವ್ಯಾಪ್ತಿಯನ್ನು ಸಾಧಿಸಿವೆ. 10 ರಾಜ್ಯಗಳು ಶೇ.75 ಕ್ಕಿಂತ ಹೆಚ್ಚು, 11 ಶೇ.50ಕ್ಕಿಂತ ಹೆಚ್ಚು, ನಾಲ್ಕು ಶೇ.50ಕ್ಕಿಂತ ಕಡಿಮೆ ವ್ಯಾಪ್ತಿಯನ್ನು ಹೊಂದಿವೆ. ಜಲ ಜೀವನ ಮಿಷನ್ 2019 ರಲ್ಲಿ ಪ್ರಾರಂಭವಾಯಿತು, 2024 ರ ವೇಳೆಗೆ ಗ್ರಾಮೀಣ ಭಾರತದ ಎಲ್ಲಾ ಮನೆಗಳಿಗೆ ನಲ್ಲಿ ಸಂಪರ್ಕಗಳ ಮೂಲಕ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರನ್ನು ಒದಗಿಸುವ ಗುರಿಯನ್ನು ಇದು ಹೊಂದಿದೆ.

## ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಮನವಿ

ಮುಂಬರುವ ಜನವರಿ 22ರಂದು ಅಯೋಧ್ಯೆಯ ರಾಮಮಂದಿರದಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠೆ ನಡೆಯಲಿದೆ. ಈ ಸುದಂದರ್ಭದಲ್ಲಿ ಜನವರಿ 22ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ನಡುವೆ ಪ್ರತಿ ಗ್ರಾಮ, ಮೊಹಲ್ಲಾ, ಕಾಲೋನಿಯ ಸಮೀಪದ ದೇಗುಲಗಳಲ್ಲಿ ರಾಮಭಕ್ತರು ಒಂದಾಗಿ ಭಜನೆ, ಕೀರ್ತನೆಗಳನ್ನು ನೆರವೇರಿಸಿ. ಟೆಲಿವಿಷನ್ ಅಥವಾ ಸ್ಕ್ರೀನ್ ಬಳಸಿ ಸಮಾಜದ ಬಾಂಧವರಿಗೆ ಅಯೋಧ್ಯೆಯ ಪ್ರಾಣ ಪ್ರತಿಷ್ಠೆಯ ನೇರ ದೃಶ್ಯಗಳನ್ನು ತೋರಿಸಿ. ಶಂಖನಾದ, ಘಂಟೆನಾದ ಮತ್ತು ಆರತಿಗಳನ್ನು ಬೆಳಗಿಸಿ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ದೇಶದ ಜನರಲ್ಲಿ ಮನವಿ ಮಾಡಿದೆ.


## ಪಠ್ಯದಲ್ಲಿ ಇಂಡಿಯಾ ಬದಲು 'ಭಾರತ'ಕ್ಕೆ, NCERT ಶಿಫಾರಸು

ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್ (ಎನ್‌ಸಿಇಆರ್‌ಟಿ) ಪುಸ್ತಕಗಳನ್ನು ಪರಿಷ್ಕರಣೆ ಮಾಡುವ ಫೋಕಸ್ ಗ್ರೂಪ್ ಎಲ್ಲಾ ಪಠ್ಯಪುಸ್ತಕಗಳಲ್ಲಿ ಇಂಡಿಯಾವನ್ನು 'ಭಾರತ್' ಎಂದು ಕರೆಯಬೇಕೆಂದು ಸಲಹೆ ನೀಡಿದೆ. 2022ರ ಸಮಾಜ ವಿಜ್ಞಾನ ಸಮಿತಿಯು ಈ ಸಲಹೆಯನ್ನು ಮಾಡಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ ಎಂದು ಸಮಿತಿಯ ಅಧ್ಯಕ್ಷ ಪ್ರೊ.ಸಿ.ಐ. ಐಸಾಕ್ ಹೇಳಿದ್ದಾರೆ.

## ಕ್ರಿಯೇಟೀವ್ ಸಿಟೀಸ್ ಪಟ್ಟಿಗೆ ಗ್ವಾಲಿಯರ್ & ಕೋಝಿಕ್ಕೋಡ್

ಯುನೆಸ್ಕೋ ಕ್ರಿಯೇಟಿವ್ ಸಿಟೀಸ್ ನೆಟ್‌ವರ್ಕ್‌ಗೆ ಸೇರ್ಪಡೆಗೊಂಡ 55 ಹೊಸ ನಗರಗಳ ಪೈಕಿ ಭಾರತದ ಗ್ವಾಲಿಯರ್ ಮತ್ತು ಕೇರಳದ ಕೋಝಿಕ್ಕೋಡ್ ಸ್ಥಾನ ಪಡೆದಿವೆ. ಅಧಿಕೃತ ವೆಬ್‌ಸೈಟ್‌ನಲ್ಲಿ ಈ ಘೋಷಣೆ ಮಾಡಿರುವ ಯುನೆಸ್ಕೋ ಈ ಹೊಸ ನಗರಗಳನ್ನು ಅದರ ಅಭಿವೃದ್ಧಿ ಕಾರ್ಯತಂತ್ರಗಳ ಭಾಗವಾಗಿ ಸಂಸ್ಕೃತಿ ಮತ್ತು ಸೃಜನಶೀಲತೆ ಬಳಸಿಕೊಳ್ಳುವಲ್ಲಿ ಬಲವಾದ ಬದ್ಧತೆಗಾಗಿ ಮತ್ತು ಮಾನವ-ಕೇಂದ್ರಿತ ನಗರ ಯೋಜನೆಯಲ್ಲಿ ನವೀನ ಅಭ್ಯಾಸಗಳನ್ನು ಪ್ರದರ್ಶಿಸಲು ಅಂಗೀಕರಿಸಲಾಗಿದೆ ಎಂದು ವಿಶ್ವಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

## ವಿವಾದಿತ 22 ಅಕ್ರಮ ಬೆಟ್ಟಿಂಗ್ ಆ?ಯಪ್ ನಿಷೇಧಿಸಿದ ಕೇಂದ್ರ




ವಿವಾದಿತ ಮಹಾದೇವ್ ಬುಕ್ ಸೇರಿದಂತೆ 22 ಅಕ್ರಮ ಬೆಟ್ಟಿಂಗ್ ಆ?ಯಪ್‌ಗಳನ್ನು ಕೇಂದ್ರ ನಿಷೇಧಿಸಿದೆ. ತನ್ನ ಆದೇಶದಲ್ಲಿ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮಹದೇವ್ ಬುಕ್ ಮತ್ತು ರೆಡ್ಡಿಅನ್ನಪ್ರೆಸ್ಟೋಪ್ರೊ ಸೇರಿದಂತೆ 22 ಅಕ್ರಮ ಬೆಟ್ಟಿಂಗ್ ಅಪ್ಲಿಕೇಶನ್‌ಗಳು ಮತ್ತು ವೆಬ್‌ಸೈಟ್‌ಗಳನ್ನು ನಿರ್ಬಂಧಿಸಿದೆ. ಜಾರಿ ನಿರ್ದೇಶನಾಲಯದ (ಇಡಿ) ಶಿಫಾರಸಿನ ಮೇರೆಗೆ ಸಚಿವಾಲಯ ಈ ಕ್ರಮ ಕೈಗೊಂಡಿದೆ.

# ಅಂಗವಿಕಲತೆಯನ್ನು ಮೀರಿ ಸಾಧನೆಯ ಶಿಖರವೇರಿದ ಭಾರತದ ದಿಟ್ಟ ಯುವತಿ ಶೀತಲ್ ದೇವಿ


ಪ್ರೇರಣಾ

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್‌ನ ಲೋಯಿಧಾರ್ ಗ್ರಾಮದ 16 ವರ್ಷದ ತೋಳಿಲ್ಲದ ಬಿಲ್ಲುಗಾರ್ತಿ ಶೀತಲ್ ದೇವಿ ಅವರು ಚೀನಾದ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಮೂರು ಪದಕಗಳನ್ನು ಗಳಿಸಿ ವಿಶ್ವದೆಲ್ಲೆಡೆ ಮನೆ ಮಾತಾಗಿದ್ದಾರೆ. ಅವರ ಈ ಹಾದಿಯಲ್ಲಿ ಕಠಿಣ ಪರಿಶ್ರಮದಿಂದ, ಆತ್ಮವಿಶ್ವಾಸದಿಂದ, ಅಂಗವಿಕಲತೆಯನ್ನು ಲೆಕ್ಕಿಸದೇ ಇತಿಹಾಸ ಸೃಷ್ಟಿ ಮಾಡಿದ್ದಾರೆ. ಒಂದೇ ಪಂದ್ಯಕೂಟದಲ್ಲಿ ಎರಡು ಬಾರಿ ಚಿನ್ನದ ಪದಕವನ್ನು ಗಳಿಸಿದ ಪ್ರಪ್ರಥಮ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಶೀತಲ್ ದೇವಿರವರು.

ದುರಾದೃಷ್ಟವಶಾತ್ ಫೋಕೊಮೆಲಿಯಾ ಎಂಬ ಅಭಿವೃದ್ಧಿಯಾಗದ ಕೈಗಳ ಅಸ್ವಸ್ಥತೆಯ ಕಾಯಿಲೆಯೊಂದಿಗೆ ಜನಿಸಿದ ಇವರು, ಇದ್ಯಾವುದನ್ನು ಲೆಕ್ಕಿಸದೆ ಇತ್ತೀಚಿನ ವರ್ಷಗಳಲ್ಲಷ್ಟೆ ಶೀತಲ್ ದೇವಿಯವರು ಈ ಕ್ರೀಡೆಗಾಗಿ ತರಬೇತಿ ಪ್ರಾರಂಭಿಸಿದರು. ಇವರು ಚಿಕ್ಕಂದಿನಲ್ಲಿ ಆಟಕ್ಕಾಗಿ ಮನೆಯ ಹತ್ತಿರ ಮರಗಳನ್ನು ಹತ್ತುವುದರ ಮೂಲಕ ಅವರ ದೇಹದ ಮೇಲ್ಭಾಗವನ್ನು ಈ ಮಟ್ಟದ ಸಾಧನೆಗಾಗಿ ಬಲಪಡಿಸಿಕೊಂಡರು. 2021ರಲ್ಲಿ ಭಾರತೀಯ ಸೇನೆಯು ಆಯೋಜಿಸಿದ್ದ ಸ್ಥಳೀಯ ಕ್ರೀಡಾ ಶಿಬಿರ ಇವರ ಪ್ರತಿಭೆಯ ಗಮನ ಸೆಳೆಯಿತು.

ಪ್ರಾಸ್ಥೆಟಿಕ್ ತೋಳು ಇವರ ಕ್ರೀಡಾ ಜಗತ್ತಿನ ಬಾಗಿಲು ತೆರೆಯಿತಾದರು, ಆ ಹಾದಿ ಸುಗಮವಾಗಿರಲಿಲ್ಲ, ಅನೇಕ ವಿಫಲ ಪ್ರಯತ್ನಗಳ ನಂತರವೂ ಭರವಸೆ ಕಳೆದುಕೊಳ್ಳದ ಶೀತಲ್‌ರವರು ಕತ್ರಾದಲ್ಲಿರುವ ಶ್ರೀ ಮಾತಾ ವೈಷ್ಣೋದೇವಿ ಶ್ರೈನ್ ಬೋರ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ತರಬೇತಿಯನ್ನು ಪ್ರಾರಂಭಿಸಿದರು. ಆಕೆಯ ತರಬೇತುದಾರರಾದ ಅಭಿಲಾಷಾ ಚೌಧರಿ ಮತ್ತು ಕುಲದೀಪ್ ವೆದ್ವಾನ್ ಅವರು ಸ್ಪ್ರಂಟ್ಜ್‌ಮನ್ ತಂತ್ರದ ಸ್ಪೂರ್ತಿ ಪಡೆದು, ಭುಜದ ಕಡೆಯಿಂದ ರಿಲೀಸರ್ ಮಾರ್ಪಡಿಸಿದ ಗಲ್ಲ ಮತ್ತು ಬಾಯಿಯ ಮೂಲಕ ಟ್ರಿಗರ್ ಎಳೆಯಲು ಮತ್ತು ಬಾಣವನ್ನು ಬಿಡಲು ಸ್ಪ್ರಿಂಗ್ ಯಾಂತ್ರಿಕತೆಯನ್ನು ರೂಪಿಸುವುದರಲ್ಲಿ ಯಶಸ್ವಿಯಾದರು.

ನಂತರ ಕಠಿಣ ತರಬೇತಿಯಲ್ಲಿ ತೊಡಗಿಸಿಕೊಂಡ ಶೀತಲ್‌ರವರು ಪ್ರತಿದಿನ ಶಾಟ್‌ಗಳ ಸಂಖ್ಯೆಯನ್ನು ಕ್ರಮೇಣ ಹೆಚ್ಚಿಸುತ್ತಾ ದಿನಕ್ಕೆ 50 ರಿಂದ ಪ್ರಾರಂಭಿಸಿ ನಿಯಮಿತವಾಗಿ 300ಕ್ಕೆ ಏರಿಸಿಕೊಂಡರು. ಆರು ತಿಂಗಳ ನಂತರ, ಅವರು ಸೋನೆಪತ್‌ನಲ್ಲಿ





ನಡೆದ ಪ್ಯಾರಾ ಓಪನ್ ನ್ಯಾಷನಲ್ಸ್‌ನಲ್ಲಿ ಬೆಳ್ಳಿ ಪದಕವನ್ನು ಗೆದ್ದರು, ನಂತರ ಒಂದೆರಡು ಚಿನ್ನದ ಪದಕಗಳು ಮತ್ತು ಪ್ಯಾರಾ ಗೇಮ್ಸ್‌ನಲ್ಲಿ ಎರಡನೇ ಸ್ಥಾನವನ್ನು ಗಳಿಸಿದರು. ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಸೇರಿದಂತೆ ಇವರ ಸಾಧನೆಗೆ ವಿಶ್ವದೆಲ್ಲೆಡೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ.

ಸತತ ಪ್ರಯತ್ನ, ಆತ್ಮ ವಿಶ್ವಾಸ, ಕಠಿಣ ಪರಿಶ್ರಮ ಇದ್ದರೆ ಅಂಗವಿಕಲತೆ ಮಾತ್ರವಲ್ಲ, ಏನ್ನನು ಬೇಕಾದರೂ ಮೆಟ್ಟಿ ನಿಲ್ಲಬಹುದು ಎಂಬ ಪ್ರೇರಣಾದಾಯಿ ಜೀವನ ಶೀತಲ್ ದೇವಿಯವರದ್ದು. ನೆಲದ ಮೇಲೆ ನಿಂತು, ಆಕಾಶವನ್ನೇ ಗುರಿಯಾಗಿರಿಸಿಕೊಳ್ಳಬಹುದಾದಂತ ಇವರು ಮುಂದೆ ದೇಶಕ್ಕಾಗಿ ಇನ್ನೂ ಅನೇಕ ಪ್ರಶಸ್ತಿಗಳನ್ನು ಗಳಿಸಲಿ ಎಂಬುದು ಆಶಯ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th NOVEMBER 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-11-2023



# ಏಕತೆಯಿಂದ ರಾಷ್ಟ್ರದ ನವೋತ್ಥಾನ : ಡಾ. ಮೋಹನ್ ಭಾಗವತ್

## ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರ ವಿಜಯದಶಮಿ ಭಾಷಣದಿಂದ ಆಯ್ದ ಅಂಶಗಳು

ದಾನವತೆಯ ಮೇಲೆ ಮಾನವತೆ ಪೂರ್ಣ ವಿಜಯ ಸಾಧಿಸಿದ ಶಕ್ತಿಪರ್ವದ ಸಂಕೇತವಾಗಿ ನಾವು ಪ್ರತಿವರ್ಷವೂ ವಿಜಯದಶಮಿ ಉತ್ಸವವನ್ನು ಆಚರಿಸುತ್ತೇವೆ. ಈ ವರ್ಷದ ಉತ್ಸವವು ನಮ್ಮ ಗೌರವ, ಹರ್ಷೋಲ್ಲಾಸ ಮತ್ತು ಉತ್ಸಾಹವನ್ನು ಹೆಚ್ಚಿಸುವ ಘಟನೆಗಳನ್ನು ತನ್ನೊಂದಿಗೆ ತಂದಿದೆ.

**ಜಿ–20 ಶೃಂಗಸಭೆ:** ಕಳೆದ ವರ್ಷವಿಡೀ ನಮ್ಮ ದೇಶವು ಜಿ–20 ಹೆಸರಿನಲ್ಲಿ ಸೇರುವ ಪ್ರಮುಖ ದೇಶಗಳ ಶೃಂಗಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿತ್ತು. ಭಾರತೀಯರ ಆತ್ಮೀಯ ಆತಿಥ್ಯದ ಅನುಭವ, ಭಾರತದ ಗೌರವಶಾಲಿ ಇತಿಹಾಸ ಮತ್ತು ವರ್ತಮಾನದ ಉತ್ಸಾಹಭರಿತ ಅಭ್ಯುದಯವು ಜಿ–20ಯ ಎಲ್ಲಾ ಸಹಭಾಗಿಗಳನ್ನೂ ಪ್ರಭಾವಿತರನ್ನಾಗಿಸಿತು. ಆಫ್ರಿಕನ್ ಯೂನಿಯನ್ ಅನ್ನು ಸದಸ್ಯ ರಾಷ್ಟ್ರವನ್ನಾಗಿ ಸ್ವೀಕರಿಸುವಂತೆ ಹಾಗೂ ಶೃಂಗಸಭೆಯ ಮೊದಲನೆಯ ದಿನವೇ ಘೋಷಣಾ ಪ್ರಸ್ತಾವಕ್ಕೆ (Declaration Resolution) ಸರ್ವರ ಅನುಮೋದನೆಯನ್ನು ಪಡೆಯುವಲ್ಲಿ ಭಾರತದ ಪ್ರಾಮಾಣಿಕ ಸದ್ಭಾವನೆ ಮತ್ತು ರಾಜನೈತಿಕ ಕೌಶಲ್ಯವು ಎಲ್ಲರ ಅನುಭವಕ್ಕೆ ಬಂದಿತು. ಜಿ–20ರ ಅರ್ಥಕೇಂದ್ರಿತ ವಿಚಾರವು ಈಗ ಮಾನವಕೇಂದ್ರಿತ ವಿಚಾರವಾಗಿದೆ.

**ಏಷಿಯನ್ ಗೇಮ್ಸ್ & ಚಂದ್ರಯಾನ–3:** ಈ ಬಾರಿ ನಮ್ಮ ದೇಶದ ಕ್ರೀಡಾಪಟುಗಳು ಏಷಿಯಾಡ್ ಪಂದ್ಯಾವಳಿಯಲ್ಲಿ ಮೊದಲ ಬಾರಿಗೆ 100ಕ್ಕೂ ಅಧಿಕ ಅಂದರೆ ಒಟ್ಟು 107 ಪದಕ (28 ಸ್ವರ್ಣ, 38 ಬೆಳ್ಳಿ ಮತ್ತು 41 ಕಂಚು) ಗಳನ್ನು ಗೆದ್ದು ನಮ್ಮೆಲ್ಲರ ಉತ್ಸಾಹವನ್ನು ಹೆಚ್ಚಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಭಾರತದ ಶಕ್ತಿ, ಬುದ್ಧಿ ಹಾಗೂ ಯುಕ್ತಿಯ ಮಿಂಚುನೋಟವನ್ನು ಚಂದ್ರಯಾನದ ಸಂದರ್ಭದಲ್ಲೂ ವಿಶ್ವವೇ ನೋಡಿದೆ. ನಮ್ಮ ವಿಜ್ಞಾನಿಗಳ ಶಾಸ್ತ್ರಜ್ಞಾನ ಮತ್ತು ತಂತ್ರಕುಶಲತೆಯ ಜೊತೆಗೆ ನೇತೃತ್ವದ ಇಚ್ಛಾಶಕ್ತಿಯೂ ಸೇರಿಕೊಂಡಿತ್ತು. ಅಂತರಿಕ್ಷದ ಯುಗದ ಇತಿಹಾಸದಲ್ಲಿ ಮೊದಲ ಬಾರಿಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಭಾರತದ ವಿಕ್ರಂ ಲ್ಯಾಂಡರ್ ಇಳಿಯಿತು. ಎಲ್ಲ ಭಾರತೀಯರ ಗೌರವ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವ ಈ ಕಾರ್ಯದಲ್ಲಿ ಭಾಗವಹಿಸಿದ ಎಲ್ಲ ವಿಜ್ಞಾನಿಗಳನ್ನು ಮತ್ತು ಅವರಿಗೆ ಶಕ್ತಿಯನ್ನು ನೀಡಿದ ನೇತೃತ್ವವು ಇಡೀ ದೇಶದಲ್ಲಿ ಅಭಿನಂದಿತವಾಗುತ್ತಿದೆ.

**ರಾಮಮಂದಿರ ಉದ್ಘಾಟನೆಗೆ ಸಿದ್ಧತೆ:** ನಮ್ಮ ಸಂವಿಧಾನದ ಮೂಲ ಪ್ರತಿಯ ಹಿಂಭಾಗದಲ್ಲಿ ಯಾವ ಚಿತ್ರವನ್ನು ಹಾಕಲಾಗಿದೆಯೋ ಅಂತಹ ಧರ್ಮದ ಮೂರ್ತಿವೆತ್ತ ಪ್ರತೀಕವಾದ ಶ್ರೀರಾಮನ ಬಾಲಕ ರೂಪದ ಮಂದಿರ ಅಯೋಧ್ಯೆಯಲ್ಲಿ ನಿರ್ಮಾಣಗೊಳ್ಳುತ್ತಿದೆ. ಮುಂಬರುವ ಜನವರಿ 22ರಂದು ಮಂದಿರದ ಗರ್ಭಗೃಹದಲ್ಲಿ ಶ್ರೀರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಆಗಲಿದೆ ಎಂಬುದಾಗಿ ಘೋಷಣೆಯಾಗಿದೆ. ಶ್ರೀರಾಮನು ನಮ್ಮ ದೇಶದ ಘನತೆವೆತ್ತ ಆಚರಣೆಯ ಪ್ರತೀಕ, ಕರ್ತವ್ಯ ಪಾಲನೆಯ ಪ್ರತೀಕ ಹಾಗೂ ಸ್ನೇಹ ಮತ್ತು ಕರುಣೆಯ ಪ್ರತೀಕ. ತಮ್ಮ ತಮ್ಮ ಸ್ಥಾನದಲ್ಲಿದ್ದುಕೊಂಡೇ ಈ ರೀತಿಯ ವಾತಾವರಣ ನಿರ್ಮಾಣ ಮಾಡಬೇಕಾಗಿದೆ.

**ಮಹಾಪುರುಷರ ಸಂಸ್ಮರಣೆ:** ಶ್ರೀ ಮಹಾವೀರ ಸ್ವಾಮಿಯವರ ನಿರ್ವಾಣದ 2550ನೇ ವರ್ಷ, ಛತ್ರಪತಿ ಶ್ರೀ ಶಿವಾಜಿ ಮಹಾರಾಜರು ರಾಜ್ಯಾಭಿಷಿಕ್ತರಾದ 350ನೇ ವರ್ಷ, ಮಹರ್ಷಿ ದಯಾನಂದ ಸರಸ್ವತಿಯವರ 200ನೇ ಜಯಂತಿಯ ವರ್ಷವನ್ನು ಆಚರಿಸಿದ್ದೇವೆ. ಮುಂಬರುವ ವರ್ಷವು ಮಹಾರಾಣಿ ದುರ್ಗಾವತಿ ಅವರ 500ನೇ ಜಯಂತಿ ವರ್ಷ ಹಾಗೂ ಕೊಲ್ಹಾಪುರದ (ಮಹಾರಾಷ್ಟ್ರ) ರಾಜನಾಗಿದ್ದ ಛತ್ರಪತಿ ಶಾಹೂಜಿ ಮಹಾರಾಜ್ ಅವರ 150ನೇ ಜಯಂತಿ ವರ್ಷವೂ ಆಗಿದೆ. ತಮಿಳು ಸಂತ ಶ್ರೀಮದ್ ರಾಮಲಿಂಗ ವಲ್ಲಲಾರ್ ಅವರ 200ನೇ ವರ್ಷವೂ ಇತ್ತೀಚೆಗೆ ಸಂಪನ್ನಗೊಂಡಿತು.

**ಪರಿಸರ ಸಂರಕ್ಷಣೆ:** ಪ್ರಕೃತಿಯ ಮಿತಿಮೀರಿದ ಶೋಷಣೆಯಿಂದ ಮಾಲಿನ್ಯ, ಜಾಗತಿಕ ತಾಪಮಾನದಲ್ಲಿ ಏರಿಕೆ, ಋತುಗಳ ವ್ಯವಸ್ಥೆಯಲ್ಲಿ ಅಸಂತುಲನ ಮತ್ತು ಅದರ ಫಲವಾಗಿ ಹುಟ್ಟುವ ನೈಸರ್ಗಿಕ ದುರಂತಗಳೂ (Resultant Natural Disasters) ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗುತ್ತಿವೆ. ಆತಂಕವಾದ, ಶೋಷಣೆ ಮತ್ತು ನಿರಂಕುಶತೆ (Totalitarianism) ಗಳಿಗೆ ತೆರೆದ ಮೈದಾನ ಸಿಕ್ಕಂತಾಗಿದೆ. ತನ್ನ ಅಸಮರ್ಪಕ ದೃಷ್ಟಿಯಿಂದಾಗಿ ಜಗತ್ತು ಈ ಸಮಸ್ಯೆಗಳನ್ನು




ಎದುರಿಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

**ಸ್ವ–ಆಧಾರಿತ ನೀತಿ:** ಅಪೂರ್ಣ, ಅತಿ ಎನಿಸುವಷ್ಟು ಭೌತಿಕವಾದದ ಮತ್ತು ವಿಪರೀತ ಉಪಭೋಗವಾದದ ದೃಷ್ಟಿ ಆಧಾರಿತ ವಿಕಾಸ ಪಥದ ಕಾರಣದಿಂದಾಗಿ, ಮಾನವತೆ ಮತ್ತು ಪ್ರಕೃತಿಗಳು ನಿಧಾನವಾಗಿ ಆದರೆ ನಿಶ್ಚಿತವಾಗಿ ವಿನಾಶದತ್ತ ಮುನ್ನುಗ್ಗುತ್ತಿವೆ. ಇಡೀ ಜಗತ್ತಿನಲ್ಲಿ ಇದರ ಚಿಂತೆ ಹೆಚ್ಚುತ್ತಿದೆ. ಈ ಅಸಫಲ ಮಾರ್ಗವನ್ನು ತ್ಯಜಿಸಿ ಅಥವಾ ನಿಧಾನವಾಗಿ ವಾಪಾಸು ಮರಳಿ ಭಾರತೀಯ ಮೌಲ್ಯಾಧಾರಿತ ಹಾಗೂ ಭಾರತದ ಸಮಗ್ರ ಏಕಾತ್ಮ ದೃಷ್ಟಿ ಆಧಾರಿತ, ಕಾಲಕ್ಕೆ ಅನುಗುಣವಾದ, ತನ್ನದೇ ಆದ ಪ್ರತ್ಯೇಕ ವಿಕಾಸ ಮಾರ್ಗವನ್ನು ಭಾರತವು ಮಾಡಬೇಕಾಗಿದೆ. ಇದು ಭಾರತಕ್ಕೆ ಅತ್ಯಂತ ಉಪಯೋಗಕಾರಿಯಾದ ಮತ್ತು ಜಗತ್ತಿಗೂ ಅನುಕರಣೀಯವಾದ ಮಾದರಿ ಆಗಬಲ್ಲುದು.

**ಮಂತ್ರವಿಪ್ಲವ:** ಇತ್ತೀಚಿನ ದಿನಗಳಲ್ಲಿ ಈ ಸರ್ವಭಕ್ಷಕ ಶಕ್ತಿಗಳ ಜನರು ತಮ್ಮನ್ನು ತಾವು ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು ಅಥವಾ ವೋಕ್ (Woke) ಎಂದು ಕರೆದುಕೊಳ್ಳುತ್ತಾರೆ. ವೋಕ್ ಅಂದರೆ ಎಚ್ಚರಗೊಂಡವರು. ಅವರು ಪ್ರಪಂಚದ ಎಲ್ಲಾ ಸುವ್ಯವಸ್ಥೆ, ಮಾಂಗಲ್ಯ, ಸಂಸ್ಕಾರ ಹಾಗೂ ಸಂಯಮವನ್ನು ವಿರೋಧಿಸುತ್ತಾರೆ. ಈ ಬೆರಳೆಣಿಕೆಯಷ್ಟು ಜನರ ನಿಯಂತ್ರಣವು ಇಡೀ ಮಾನವ ಜನಾಂಗದ ಮೇಲೆ ಹೊಂದಲು ಅರಾಜಕತೆ ಮತ್ತು ಸ್ವೇಚ್ಛಾಚಾರವನ್ನು ಪುರಸ್ಕರಿಸುತ್ತಾರೆ, ಪ್ರಚಾರ ಮತ್ತು ಪ್ರಸಾರ ಮಾಡುತ್ತಾರೆ. ಮಾಧ್ಯಮಗಳು ಮತ್ತು ಅಕಾಡೆಮಿಗಳನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಮೂಲಕ ದೇಶದ ಶಿಕ್ಷಣ, ಸಂಸ್ಕಾರ, ರಾಜಕೀಯ ನೀತಿ ಮತ್ತು ಸಾಮಾಜಿಕ ವಾತಾವರಣವನ್ನು ಭ್ರಮೆ ಮತ್ತು ಭ್ರಷ್ಟಾಚಾರಕ್ಕೆ ಬಲಿಪಶು ಮಾಡುವುದು ಅವರ ಕಾರ್ಯಶೈಲಿಯಾಗಿದೆ. ನಮ್ಮ ಪರಂಪರೆಯಲ್ಲಿ ಈ ರೀತಿಯಾಗಿ ಯಾವುದೇ ರಾಷ್ಟ್ರದ ಜನರಲ್ಲಿ ಅಪನಂಬಿಕೆ, ದಿಗ್ಭ್ರಮೆ ಮತ್ತು ಪರಸ್ಪರ ದ್ವೇಷವನ್ನು ಉಂಟುಮಾಡುವ ಕಾರ್ಯ ಪ್ರಣಾಲಿಕೆಯನ್ನು ಮಂತ್ರ ವಿಪ್ಲವ ಎಂದು ಕರೆಯಲಾಗುತ್ತದೆ. ದೇಶದಲ್ಲಿ ರಾಜಕೀಯ ಸ್ವಾರ್ಥದ ಕಾರಣಕ್ಕಾಗಿ ರಾಜಕೀಯ ಪ್ರತಿಸ್ಪರ್ಧಿಯನ್ನು ಸೋಲಿಸಲು ಇಂತಹ ಅನಪೇಕ್ಷಿತ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಳ್ಳುವುದು ಅವಿವೇಕದ ಕೆಲಸ. ಸಮಾಜವು ಈಗಾಗಲೇ ಆತ್ಮವಿಸ್ಮೃತಿಗೊಂಡು, ಅನೇಕ ಪ್ರಕಾರದ ಭೇದಗಳಿಂದ ಜರ್ಜರಿತಗೊಂಡು ಸ್ವಾರ್ಥ, ಸ್ವಹಿತಾಸಕ್ತಿ, ಅಸೂಯೆ ಮತ್ತು ದ್ವೇಷದ ಘಾತಕ ಸ್ಪರ್ಧೆಯಲ್ಲಿ ಸಿಲುಕಿಕೊಂಡಿದೆ.

**ಮಣಿಪುರ:** ಮಣಿಪುರ ಸಮಸ್ಯೆಯ ಪರಿಹಾರಕ್ಕಾಗಿ ಬಹು ಆಯಾಮದ ಪ್ರಯತ್ನಗಳ ಆವಶ್ಯಕತೆಯಿರುತ್ತವೆ. ಇದಕ್ಕಾಗಿ, ರಾಜಕೀಯ ಇಚ್ಛಾಶಕ್ತಿ, ಅದಕ್ಕನುಗುಣವಾದ ಕ್ರಿಯಾಶೀಲತೆ ಮತ್ತು ದಕ್ಷತೆ ಈ ಕಾಲದ ಅಗತ್ಯವಾಗಿದೆ. ಅದೇ ಸಮಯದಲ್ಲಿ, ದುರದೃಷ್ಟಕರ ಪರಿಸ್ಥಿತಿಗಳ ಕಾರಣ ಉಂಟಾದ ಪರಸ್ಪರ ಅಪನಂಬಿಕೆಯ ಅಂತರವನ್ನು ಕಡಿಮೆ ಮಾಡುವಲ್ಲಿ ಸಮಾಜದ ಪ್ರಬುದ್ಧ ನೇತೃತ್ವವು ವಿಶೇಷ ಪಾತ್ರವನ್ನು ವಹಿಸಬೇಕಾಗುತ್ತದೆ. ಸಂಘದ ಸ್ವಯಂಸೇವಕರು ಸಮಾಜದ ವಿವಿಧ ಸ್ತರಗಳಲ್ಲಿ ನಿರಂತರವಾಗಿ ಎಲ್ಲರ ಸೇವೆ ಮತ್ತು ಪರಿಹಾರ ಕಾರ್ಯಗಳನ್ನು ಮಾಡುವುದರ ಜೊತೆಗೆ ಸಮಾಜದ ಸಜ್ಜನಶಕ್ತಿಯ ಶಾಂತಿಗಾಗಿ ಮನವಿ ಮಾಡುತ್ತಿದ್ದಾರೆ. ಎಲ್ಲರನ್ನೂ ತಮ್ಮವರೇ ಎಂದು ಸ್ವೀಕರಿಸಿ, ಎಲ್ಲ ರೀತಿಯ ಬೆಲೆ ತೆತ್ತು ಅವರಿಗೆ ತಿಳುವಳಿಕೆ ಮೂಡಿಸುವ ಮೂಲಕ ಎಲ್ಲರನ್ನೂ ಸುರಕ್ಷಿತವಾಗಿ, ವ್ಯವಸ್ಥಿತರಾಗಿ, ಸದ್ಭಾವದಿಂದ ಪರಿಪೂರ್ಣರಾಗಿ, ಸೌಹಾರ್ದತೆಯಿಂದ, ಶಾಂತಿಯುತವಾಗಿ ಇರಿಸುವುದಕ್ಕಾಗಿಯೇ ಸಂಘದ ಪ್ರಯತ್ನ ಮಾಡುತ್ತಿದೆ. ಈ ಭಯಾನಕ ಮತ್ತು ಉದ್ವಿಗ್ನಕಾರಿ ಪರಿಸ್ಥಿತಿಯಲ್ಲಿಯೂ ತಾಳ್ಮೆಯ ಮನಸ್ಸಿನಿಂದ ಎಲ್ಲರನ್ನೂ ಸಂಭಾಳಿಸಲು ಪ್ರಯತ್ನಿಸಿದ ನಮ್ಮ ಕಾರ್ಯಕರ್ತರ ಪ್ರಯತ್ನದ ಕುರಿತು ಮತ್ತು ಆ ಸ್ವಯಂಸೇವಕರ ಕುರಿತು ನಮಗೆ ಹೆಮ್ಮೆ ಇದೆ.

**ಏಕತೆಯ ಆಧಾರ:** ಸಮಾಜದ ಶಾಶ್ವತ ಏಕತೆಯು ಪರಸ್ಪರ ಬಂಧುತ್ವದಿಂದ ಬರುತ್ತದೆ, ಸ್ವಾರ್ಥದ ಮಾರ್ಗಗಳಿಂದಲ್ಲ. ನಮ್ಮ ಸಮಾಜ ಬಹಳ ದೊಡ್ಡದು. ಬಹಳ ವಿವಿಧತೆಯಿಂದ ತುಂಬಿದೆ. ಕಾಲಾನಂತರದಲ್ಲಿ, ವಿದೇಶದಿಂದ ಕೆಲವು ಆಕ್ರಮಣಕಾರಿ ಸಂಪ್ರದಾಯಗಳು ನಮ್ಮ ದೇಶವನ್ನು ಪ್ರವೇಶಿಸಿದವು, ಆದರೂ ನಮ್ಮ ಸಮಾಜವು ಒಂದು ಸಮಾಜವಾಗಿ ಉಳಿದು ನಿಂತಿದೆ. ಆದ್ದರಿಂದ, ನಾವು ಏಕತೆಯ ಬಗ್ಗೆ ಮಾತನಾಡುವಾಗ, ಈ ಏಕತೆಯನ್ನು ಯಾವುದೇ ಕೊಡು–ಕೊಳ್ಳುವಿಕೆಯಿಂದ ಸಾಧಿಸಲಾಗುವುದಿಲ್ಲ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಬಲವಂತವಾಗಿ ಸಾಧಿಸಲು ಹೊರಟರೆ ಮತ್ತೆ ಮತ್ತೆ ಕೆಡುತ್ತದೆ. ನಾವು ಸಮಾನ ಪೂರ್ವಜರ ವಂಶಸ್ಥರು, ಒಂದೇ ಮಾತೃಭೂಮಿಯ ಮಕ್ಕಳು, ಒಂದು ಸಂಸ್ಕೃತಿಯ ವಾರಸುದಾರರು, ನಮ್ಮ ಪರಸ್ಪರ ಏಕತೆಯನ್ನು ಮರೆತಿದ್ದೇವೆ. ನಾವು ನಮ್ಮ ಆ ಮೂಲ ಏಕತೆಯನ್ನು ಅರ್ಥಮಾಡಿಕೊಂಡು ಅದರ ಆಧಾರದಲ್ಲಿ ಮತ್ತೆ ಒಂದಾಗಬೇಕು.

**ಮತದಾನ:** ಮುಂಬರುವ 2024ರ ಆರಂಭದ ದಿನಗಳಲ್ಲಿ ಲೋಕಸಭೆ ಚುನಾವಣೆ ನಡೆಯಲಿದೆ. ಚುನಾವಣೆಯಲ್ಲಿ ಆಮಿಷಗಳನ್ನು ಒಡ್ಡಿ ಭಾವನೆಗಳನ್ನು ಪ್ರಚೋದಿಸುವ ಮೂಲಕ ಮತಗಳನ್ನು ಕೊಯ್ಲು ಮಾಡುವ ಪ್ರಯತ್ನಗಳನ್ನು ಅಪೇಕ್ಷಿಸಲಾಗುವುದಿಲ್ಲ, ಆದರೆ ಅವು ನಡೆಯುತ್ತಲೇ ಇರುತ್ತವೆ. ಸಮಾಜವನ್ನು ವಿಭಜಿಸುವ ಇಂತಹ ಸಂಗತಿಗಳಿಂದ ನಾವು ದೂರವಿರಬೇಕಿದೆ. ಮತದಾನ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಅದನ್ನು ಅವಶ್ಯವಾಗಿ ನಿರ್ವಹಿಸಬೇಕು. ದೇಶದ ಏಕತೆ, ಸಮಗ್ರತೆ, ಅಸ್ಮಿತೆ ಮತ್ತು ಅಭಿವೃದ್ಧಿಯ ವಿಷಯಗಳನ್ನು ಪರಿಗಣಿಸಿ ನಿಮ್ಮ ಮತ ಚಲಾಯಿಸಿ.

**ಸಾಮೂಹಿಕ ಪ್ರಯತ್ನದಿಂದ ಪರಿವರ್ತನೆ:** 2025ರಿಂದ 2026ರ ವರ್ಷವು ಸಂಘ 100 ವರ್ಷಗಳನ್ನು ಪೂರ್ಣಗೊಳಿಸಿದ ನಂತರದ ವರ್ಷವಾಗಿದೆ. ಸಮಾಜದ ನಡವಳಿಕೆ ಮತ್ತು ಮಾತಿನಲ್ಲಿ ಇಡೀ ಸಮಾಜ ಮತ್ತು ದೇಶಕ್ಕೆ ಸಂಬಂಧಿಸಿದ ಆತ್ಮೀಯ ಭಾವನೆ ವ್ಯಕ್ತವಾಗಬೇಕು. ದೇವಸ್ಥಾನ, ನೀರು, ಸ್ಮಶಾನದಲ್ಲಿ ಯಾವುದೇ ಭೇದಭಾವ ಇನ್ನೂ ಉಳಿದಿದ್ದರೆ ಅದು ಕೊನೆಗೊಳ್ಳಬೇಕು. ಕುಟುಂಬದ ಎಲ್ಲ ಸದಸ್ಯರಲ್ಲಿ ದಿನನಿತ್ಯ ಶುಭ ಸಂವಹನ, ಸಂಸ್ಕಾರಯುತ ನಡವಳಿಕೆ ಮತ್ತು ಸಂವೇದನಾಶೀಲತೆ ಮುಂದುವರಿಯಬೇಕು, ಬೆಳೆಯುತ್ತಲೇ ಇರಬೇಕು ಮತ್ತು ಅದರ ಮೂಲಕ ಸಮಾಜದ ಸೇವೆಯೂ ಆಗುತ್ತಲಿರಲಿ. ನಿಮ್ಮ ಮನೆಯಿಂದ ನೀರನ್ನು ಉಳಿಸುವ ಮೂಲಕ, ಪ್ಲಾಸ್ಟಿಕ್ ತೊಡೆದುಹಾಕುವ ಮೂಲಕ ಮತ್ತು ನಿಮ್ಮ ಮನೆಯ ಅಂಗಳದಲ್ಲಿ ಮತ್ತು ಸುತ್ತಮುತ್ತಲಿನ ಹಸಿರನ್ನು ಹೆಚ್ಚಿಸುವ ಮೂಲಕ ಪ್ರಕೃತಿಯೊಂದಿಗೆ ಸಂಬಂಧವನ್ನು ಕಾಪಾಡಿಕೊಳ್ಳಬೇಕು. ಸ್ವದೇಶಿ ನಡವಳಿಕೆಯಿಂದ ಸ್ವನಿರ್ಭರತೆ ಮತ್ತು ಸ್ವಾವಲಂಬನೆ ಹೆಚ್ಚಾಗುತ್ತದೆ. ದುಂದುವೆಚ್ಚ ನಿಲ್ಲಬೇಕು. ದೇಶದ ಉದ್ಯೋಗಾವಕಾಶ ಹೆಚ್ಚಬೇಕು ಮತ್ತು ದೇಶದ ಹಣ ದೇಶದಲ್ಲೇ ಬಳಕೆಯಾಗಬೇಕು. ಆದುದರಿಂದ ಸ್ವದೇಶಿ ಆಚರಣೆ, ನಡತೆಯೂ ಮನೆಯಿಂದಲೇ ಆರಂಭವಾಗಬೇಕು. ಕಾನೂನು ಮತ್ತು ಸುವ್ಯವಸ್ಥೆ ಮತ್ತು ಪೌರತ್ವದ ನಿಯಮಗಳನ್ನು ಅನುಸರಿಸಬೇಕು ಮತ್ತು ಸಮಾಜದಲ್ಲಿ ಎಲ್ಲೆಡೆ ಪರಸ್ಪರ ಸಾಮರಸ್ಯ ಮತ್ತು ಸಹಕಾರದ ಪ್ರವೃತ್ತಿ ವ್ಯಕ್ತವಾಗಬೇಕು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.